ಆ) ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಂಡು ಸ್ಟಾಂಪ್ ಪೇಪರುಗಳನ್ನು ವಿತರಿಸುವರೆ?:

ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಸಾಕಷ್ಟು ಮುದ್ರಾಂಕಗಳು ದಾಸ್ತಾನಿದ್ದು ಮುದ್ರಾಂಕ ಮಾರಾಟಗಾರರಿಗೆ ಅವರ ಬೇಡಿಕೆಗನುಗುಣವಾಗಿ ಮುದ್ರಾಂಕಗಳನ್ನು ವಿತರಿಸಲಾಗುತ್ತಿದೆ.

ಶ್ರೀ ಹೆಚ್. ಗೋಪಾಲ ಭಂಡಾರಿ (ಶ್ರೀ ಕೆ. ಗೋಪಾಲ ಪೂಜಾರಿ, ಬೈಂದೂರು ಅವರ ಪರವಾಗಿ): 5-10 ರೂಪಾಯಿಗಳ ಸ್ಟಾಂಪ್ ಪೇಪರ್ ಕೇಳಿದರೆ ಇರುವುದಿಲ್ಲ. 200-300 ರೂಪಾಯಿಗಳ ಸ್ಟಾಂಪ್ ಪೇಪರ್ ಮಾರುವ ವ್ಯವಸ್ಥೆ ಇದ್ದು, ಇದರಿಂದ ಸಾಮಾನ್ಯ ಜನರಿಗೆ ಸಮಸ್ಯೆಯಾಗುತ್ತಿದ್ದು, ಇನ್ನು ಮುಂದೆ ಈ ರೀತಿಯಾಗದ ಹಾಗೆ ವ್ಯವಸ್ಥೆ ಮಾಡಬೇಕೆಂದು ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ. ಶಿವಣ್ಣ (ಮುಖ್ಯಮಂತ್ರಿಗಳ ಪರವಾಗಿ): ಕುಂದಾಪುರದಲ್ಲಿ ಸ್ಟಾಂಪ್ ವೆಂಡರ್ಸ್ ಎಂದು ಸುಮಾರು 22 ಜನರು ನೋಂದಾವಣೆ ಮಾಡಿಕೊಂಡಿದ್ದು, ಅವರಲ್ಲಿ ಸ್ಟಾಂಪ್ ಪೇಪರ್ ಬೇಕಾಗಿದೆ ಎಂದು ಕೇವಲ 6 ಜನರು ಕೇಳಿದ್ದಾರೆ. ಈ ತಿಂಗಳಲ್ಲಿ ಸ್ಟಾಂಪ್ ಪೇಪರ್‌ನ ಸ್ಟಾಕ್ ಸಾಕಷ್ಟಿದೆ. ಏನಾದರೂ ತೊಂದರೆ ಇದೆ ಎಂದು ಹೇಳಿದರೆ, ಸಪ್ಲೈ ಮಾಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಹಾಗಾದರೆ, ಉಳಿದವರು ವ್ಯಾಪಾರವನ್ನು ನಿಲ್ಲಿಸಿದ್ದಾರೆಯೇ? ಅಲ್ಲಿ ಶಾರ್ಟೇಜ್ ಇದ್ದರೂ ಇರಬಹುದು. ಅದರ ಬಗ್ಗೆ ಸಚಿವರು ಪರಿಶೀಲನೆ ಮಾಡಬೇಕು.

ಶ್ರೀ ಎಂ. ಶಿವಣ್ಣ: ನಮಗಿರುವ ಮಾಹಿತಿಯ ಪ್ರಕಾರ, 5 ರೂಪಾಯಿಯ ಸ್ಟಾಂಪ್ ಪೇಪರ್ 1,150,10 ರೂಪಾಯಿ 1,577 ಸ್ಟಾಂಪ್ ಪೇಪರ್ 20 ರೂಪಾಯಿ ಸ್ಟಾಂಪ್ ಪೇಪರ್ 2,729 ಸ್ಟಾಂಪ್‌ಪೇಪರ್50 ರೂಪಾಯಿ 2,340 ಸ್ಟಾಂಪ್ ಪೇಪರ್ ಸ್ಟಾಕ್ ಇದೆ. ಅವರು ಬೇಕೆಂದೇ ಕೃತಕ ಅಭಾವ ಉಂಟು ಮಾಡುತ್ತಿದ್ದಾರೆ. ಶಾರ್ಟೇಜ್ ಇದ್ದರೆ, ಎಷ್ಟು ಬೇಕಾದರೂ ಸಪ್ಲೈ ಮಾಡುತ್ತೇವೆ.

ಬೆಂಗಳೂರಿನ ಮಾಗಡಿ ರಸ್ತೆ ಪೊಲೀಸ್ ವಸತಿ ಸಮುಚ್ಛಯದ ದುರಸ್ತಿ

55 (341) **ಶ್ರೀ ಸುರೇಶ್ ಕುಮಾರ್ ಎಸ್.** (ರಾಜಾಜಿನಗರ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಪೊಲೀಸ್ ವಸತಿ ಸಮುಚ್ಚಯ ನಿರ್ಮಾಣವಾದದ್ದು ಯಾವಾಗ; ಇಲ್ಲಿರುವ ವಸತಿಗಳೆಷ್ಟು;

ಅ) ಈ ಸಮುಚ್ಚಯ ಶಿಥಿಲಗೊಂಡಿದ್ದು, ಬೀಳುವ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದರಿ ಸಮುಚ್ಚಯದ ಬದಲಿಗೆ ಬೇರೊಂದು ಸ್ಥಳದಲ್ಲಿ ವಸತಿ ಸಮುಚ್ಚಯ ನಿರ್ಮಿಸಿ ಕೊಡುವಲ್ಲಿ ಸರ್ಕಾರದ ನಿಲುವೇನು;

ಈ) ಈಗ ಶಿಥಿಲವಾಗಿರುವ ವಸತಿ ಸಮುಚ್ಚಯವನ್ನು ದುರಸ್ತಿ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಪೊಲೀಸ್ ವಸತಿ ಸಮುಚ್ಚಯವನ್ನು 1963ರಲ್ಲಿ ನಿರ್ಮಿಸಲಾಗಿದೆ. ಸದರಿ ವಸತಿ ಸಮುಚ್ಚಯವು 39 ಬ್ಲಾಕ್‌ಗಳನ್ನು ಹೊಂದಿದ್ದು ಒಟ್ಟು 432 ವಸತಿ ಗೃಹಗಳು ಇರುತ್ತದೆ.

ಆ) ಕೆಲವು ಅತಿ ಅವಶ್ಯಕವಾದ ರಿಪೇರಿ ಕೆಲಸ ಪ್ರಾರಂಭಿಸಬೇಕಾಗಿದೆ.

ಇ) ಬೆಂಗಳೂರು ನಗರದಲ್ಲಿರುವ ವಸತಿ ಗೃಹಗಳ ದುರಸ್ತಿಗಾಗಿ 27,00,000-00ಗಳ ಅನುದಾನ ಬಿಡುಗಡೆಯಾಗಿದ್ದು, ಈ ಬಿಡುಗಡೆ ಅನುದಾನದಲ್ಲಿ 4.5 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದ್ದು ಈ ವಸತಿ ಗೃಹಗಳ ದುರಸ್ತಿಯ ಕಾಮಗಾರಿಯನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಒಂದೊಂದು ಬ್ಲಾಕ್‌ನಲ್ಲಿ 12 ಮನೆಗಳಿದ್ದು, ಕೆಲವು ಬ್ಲಾಕ್‌ಗಳು ಬಿದ್ದುಹೋಗುವ ಸ್ಥಿತಿಯಲ್ಲಿವೆ. ಒಂದೊಂದು ಬ್ಲಾಕ್‌ನ ಪ್ಲಾಸ್ಟರಿಂಗ್‌ಗೆ ಕನಿಷ್ಠ ಎರಡು ಲಕ್ಷ ರೂಪಾಯಿಗಳು ಬೇಕು. ನಾಲ್ಕೂವರೆ ಲಕ್ಷ ರೂಪಾಯಿಗಳಲ್ಲಿ ಏನನ್ನೂ ಮಾಡಲಾಗುವುದಿಲ್ಲ. ತಾವು ಮಾಡುತ್ತಿರುವ ಕೆಲಸ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಇದ್ದಹಾಗಿರುತ್ತದೆ. ಅಲ್ಲಿ ಪೇದೆಗಳು ವಾಸಿಸುವ ಜಾಗವದು. ಯಾರಿಂದ ಸಮಾಜಕ್ಕೆ ಸುಭದ್ರತೆ ಬೇಕೆಂದು ನಾವು ಬಯಸುತ್ತೇವೆ, ಅವರ ಮನೆಗೇ ಇಂದು ಭದ್ರತೆ ಇಲ್ಲ. ಈ ನಿಟ್ಟಿನಲ್ಲಿ ಅಲ್ಲಿ ವಾಟರ್‌ಲೈನ್ ಸ್ಯಾನಿಟರಿ ಲೈನ್, ಪ್ಲಾಸ್ಟರಿಂಗ್ ಸರಿ ಇಲ್ಲ. ಒಟ್ಟಾರೆಯಾಗಿ, ಈ ಕ್ವಾರ್ಟರ್ಸ್‌ಗೆ ಒಂದು ಪುನರುಜ್ಜೀವನ ಮಾಡಲು ಏನಾದರೂ ಒಂದು ಪ್ಯಾಕೇಜ್ ಮಾಡಲು ಯೋಚಿಸುತ್ತಿದ್ದೀರಾ? ಸರ್ಕಾರದವರು ಹೊಸದಾಗಿ 5,500 ಮನೆಗಳನ್ನು ಕಟ್ಟಲು ಯೋಚಿಸುತ್ತಿರುವಾಗ, ಇರುವ ಮನೆಗಳನ್ನೇ ಏಕೆ ಭದ್ರಪಡಿಸಬಾರದು?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸುರೇಶ್‌ಕುಮಾರ್‌ರವರು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. 39 ಬ್ಲಾಕ್‌ಗಳಲ್ಲಿ ಸುಮಾರು 432 ಮನೆಗಳೀನಿವೆ, ಅವು ಬಹಳ ಕೆಟ್ಟ ಸ್ಥಿತಿಯಲ್ಲಿವೆ. ಅದರ ದುರಸ್ಥಿಗಾಗಿ ಪಿಡಬ್ಲ್ಯುಡಿಯವರು ಸುಮಾರು 15 ಲಕ್ಷದ 92 ಸಾವಿರ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದಾರೆ. ಅದೂ ಕಡಿಮೆಯಿರಬಹುದೆಂದು ನನಗೆ ಅನ್ನಿಸುತ್ತದೆ. ಏಕೆಂದರೆ, ಅದನ್ನು ರಿಪೇರಿ ಮಾಡಿದ್ದು, ಎರಡು ವರ್ಷಗಳ ಹಿಂದೆ. ತಾವು ಹೇಳಿದ ಹಾಗೆ, ನೀರಿನ ಕೊರತೆ, ರಸ್ತೆ, ಪ್ಲಾಸ್ಟರಿಂಗ್ ಮಾಡುವುದು ಇದೆ. ಕಿಟಕಿ,

ಬಾಗಿಲು ಸಹ ಇಲ್ಲವೆಂದು ನಾನು ಕೇಳಿದ್ದೇನೆ. ಇದು ಪತ್ರಿಕೆಯಲ್ಲಿಯೂ ವರದಿಯಾಗಿದೆ. ನಾನು ಆಗ ತಕ್ಷಣವೇ ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಬಿಡುಗಡೆ ಮಾಡಿಸಿದ್ದೆ. ನಿನ್ನೆ ಕೂಡ ತಮ್ಮ ಟೌಟ್ ಆಫ್ ಸೇವಿಂಗ್ಸ್‌ನಲ್ಲಿ ಈ ಪ್ರಶ್ನೆ ಬಂದಮೇಲೆ ಪುನಃ ಅವರನ್ನು ಕರೆದು ಇನ್ನೊಂದು 10 ಲಕ್ಷ ರೂಪಾಯಿಗಳನ್ನು ಇದಕ್ಕೆ ರಿಲೀಸ್ ಮಾಡಿ, ಆದಷ್ಟು ಮನೆಗಳನ್ನು ವ್ಯವಸ್ಥಿತವಾಗಿಡುವ ದೃಷ್ಟಿಯಿಂದ ಎಲ್ಲೆಲ್ಲಿ ಮೇಜರ್ ರಿಪೇರ್ಸ್ ತೆಗೆದುಕೊಳ್ಳಬೇಕೋ, ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಸಣ್ಣಪುಟ್ಟ ರಿಪೇರ್ಸ್‌ಗೆ ಮುಂದಿನ ವರ್ಷದ ಬಜೆಟ್‌ನಲ್ಲಿ ಹಣ ಕೊಟ್ಟು, ಈ ಕಾಲೋನಿಯನ್ನು ಒಳ್ಳೆಯ ಕಾಲೋನಿಯನ್ನಾಗಿ ಮಾಡುವ ಪ್ರಯತ್ನ ಮಾಡುತ್ತೇವೆ. ತಾವು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಹೊಸದಾಗಿ ಮನೆಗಳನ್ನು ಕಟ್ಟಿಸುವುದು, ಇನ್ನೊಂದು ಕಡೆ ಇರುವ ಮನೆಗಳನ್ನು ನಾವು ವ್ಯವಸ್ಥಿತವಾಗಿ ಇಟ್ಟುಕೊಳ್ಳದ ರೀತಿಯಲ್ಲಿ ನೆಗ್ಲೆಕ್ಟ್ ಮಾಡುವುದಿದೆ. ಅದನ್ನು ನಾನು ಗಮನದಲ್ಲಿಟ್ಟುಕೊಂಡು ಮುಂದಿನ ನಮ್ಮ ಹಣಕಾಸಿನ ಇರುವ ವ್ಯವಸ್ಥೆಯಲ್ಲೇ ಸಾಧ್ಯವಾದಷ್ಟು ಮಟ್ಟಿಗೆ ಅದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಕಟ್ಟಡವನ್ನು ರಿಪೇರ್ಸ್ ಮಾಡಿ, ಅವರಿಗೆ ವಾಸಿಸಲು ಆ ಸ್ಥಳವನ್ನು ಯೋಗ್ಯ ಸ್ಥಳವನ್ನಾಗಿ ಮಾಡುವ ಆಶ್ವಾಸನೆ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಪೊಲೀಸರ ಮನೋಸ್ಥೈರ್ಯವನ್ನು ಹೆಚ್ಚಿಸಬೇಕಾದರೆ ಅವರು ವಾಸಿಸುತ್ತಿರುವ ವಸತಿ ಗೃಹಗಳನ್ನು ತೊಸದಾಗಿ ಕಟ್ಟುವುದು, ಅವುಗಳನ್ನು ಉತ್ತಮಪಡಿಸುವುದು ಬಹಳ ಅವಶ್ಯಕ ಇದೆ. ಕಳೆದ ಬಾರ ನಾನು ಮಾತನಾಡುವ ಸಂದರ್ಭದಲ್ಲಿ ಸಚಿವರಿಗೊಂದು ಸಲಹೆ ಕೊಟ್ಟಿದ್ದೆ. ಮೈಸೂರು ನಗರದ ಪೊಲೀಸ್ ಆಯುಕ್ತರಾದ ಶ್ರೀ ಕೆಂಪಯ್ಯನವರು ಅಲ್ಲಿರುವ ವಸತಿಗೃಹಗಳನ್ನು, ಪೊಲೀಸ್ ಠಾಣೆಗಳನ್ನು ಆಧುನೀಕರಣಗೊಳಿಸುವುದರಲ್ಲಿ ಉತ್ತಮವಾದ ಕೆಲಸ ಮಾಡಿದ್ದಾರೆ. ಆದರೆ, ಬೆಂಗಳೂರಿನಲ್ಲಿ ಆ ಹಣವನ್ನು ಪಿಡಬ್ಲ್ಯುಡಿಯವರಿಗೆ ಕೊಡುತ್ತಿದ್ದಾರೆ. ಲೋಕೋಪಯೋಗಿ ಇಲಾಖೆಯವರ ಕೆಲಸ ಇರುವುದು ಮಾರ್ಚಿ 30 ಮತ್ತು 31ನೇ ತಾರೀಖಿನಂದು. ವರ್ಷದಲ್ಲಿ ಅವರ ಕೆಲಸ ಇರುವುದು ಇವತ್ತು. ದಯಮಾಡಿ ಅದನ್ನು ಪೊಲೀಸ್ ಇಲಾಖೆಯವರಿಗೆ ಕೊಡಿ, ಅವರಿಗೆ ಬೇರೆ ಬೇರೆ ಕಾಂಟ್ರಾಕ್ಟ್ ಇರುವುದನ್ನು ಪಡೆದು ಉತ್ತಮಗೊಳಿಸಿಕೊಳ್ಳುವುದಕ್ಕೆ ಅವರು ಪ್ರಯತ್ನವನ್ನು ಮಾಡುತ್ತಾರೆ. ಆದನ್ನು ಪೊಲೀಸ್ ಇಲಾಖೆಗೆ ಬಿಡುಗಡೆ ಮಾಡಬೇಕೆಂದು ನನ್ನ ಒತ್ತಾಯ, ಅದು ಸಾಧ್ಯ ಇಲ್ಲವೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಹೇಳಿದ ಸಲಹೆಯನ್ನು ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಮತ್ತು ಲಿಮಿಟೆಡ್ ಇರುವ ಸಿಟಿ, ಟೌನ್‌ಗಳಲ್ಲಿ ಇದನ್ನು ಒಪ್ಪಿಕೊಳ್ಳಬಹುದು. ಇದು ಮೇಜರ್ ಆಗಿದ್ದು, ಒಂದೇ ಕಡೆ 432 ಕೊಠಡಿ ಇರತಕ್ಕಂಥದ್ದು, ಇಲ್ಲಿ ಯಾರೇ ಒಬ್ಬ ಎಸ್‌ಪಿ ಆಗಲಿ, ಡಿಸಿಪಿ ಆಗಲಿ, ಅವರು ಆಸಕ್ತಿ ವಹಿಸಿ ಇಷ್ಟೊಂದು ದುರಸ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಇದನ್ನು ನಾವು ಪಿಡಬ್ಲ್ಯುಡಿಯವರಿಗೆ ವಹಿಸಿಕೊಟ್ಟಿದ್ದೇವೆ. ಇನ್ನೊಂದು ಸಂತೋಷ ಸಂಗತಿ ಎಂದರೆ, ನಾನು ನಿಮಗೆ ಈಗಾಗಲೇ ಹೇಳಿದಂತೆ, ಇದಕ್ಕೆ ನಾಲ್ಕೂವರೆ ಲಕ್ಷ ರೂಪಾಯಿಗಳು ಆಗುವುದಿಲ್ಲವೆಂದು ತಿಳಿದು 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಒಟ್ಟಾರೆ ಹೆಚ್ಚು ಕಡಿಮೆ ರಿಪೇರಿಗಾಗಿ 15 ಲಕ್ಷ ರೂಪಾಯಿಗಳು ಹೋಗಿದೆ. ಇನ್ನು 5-6 ಲಕ್ಷ ರೂಪಾಯಿಗಳು ಬೇಕಾದರೂ ಕೂಡ, ಮುಂದಿನ ಬಜೆಟ್‌ನಲ್ಲಿ ಪಾಕಿ ವ್ಯವಸ್ಥೆ

ಮಾಡಿ ಕೊಡುತ್ತೇವೆ. ಮಾನ್ಯ ಸಿಂಧ್ಯರವರು ಹೇಳಿದ ಹಾಗೆ, ಕೆಂಪಯ್ಯನವರು ಮೈಸೂರಿನಲ್ಲಿದ್ದಾಗ ಅನೇಕ ಪೊಲೀಸ್ ಸ್ಟೇಷನ್‌ಗಳನ್ನು ಹಾಗೂ ವಸತಿ ಗೃಹಗಳನ್ನು ಹಾಗೂ ಕಲ್ಯಾಣ ಮಂಟಪಗಳನ್ನು ಕೂಡ ಕಟ್ಟಿಸುವ ಸರ್ವಪ್ರಯತ್ನಗಳನ್ನು ಮಾಡಿದ್ದಾರೆ. ದುರ್ದೈವವಶಾತ್ ಈ ಸಮಾಜದಲ್ಲಿ ಏನಾಗುತ್ತದೆಂದರೆ, ಯಾವ ಅಧಿಕಾರಿಗಳು ಆಸಕ್ತಿವಹಿಸಿ ಒಳ್ಳೆಯ ಕೆಲಸವನ್ನು ಮಾಡುತ್ತಾರೋ ಆ ಕೆಲಸವನ್ನು ಮಾಡುವವರಿಗೆ ಒಂದು ಚುಕ್ಕೆಯನ್ನು ಕೂಡಿಸುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಅದಕ್ಕೆ ಹಣ ಎಲ್ಲಿಂದ ಬಂತು? ಅದನ್ನು ರಿಪೇರಿ ಹೇಗೆ ಮಾಡಿಸಿದ ಅದನ್ನು ಯಾರು ಕೊಟ್ಟರು ಇಂತಹ ಪ್ರಶ್ನೆಗಳನ್ನು ಕೇಳಿಕೊಂಡು ಅಂತಹ ಒಳ್ಳೆಯ ಕೆಲಸ ಆಗತಕ್ಕಂಥದ್ದನ್ನು ತಡೆ ಹಾಕುತ್ತೇವೆಯೇ ಹೊರತಾಗಿ ಬೇರೆ ಏನು ಕೆಲಸವನ್ನು ಮಾಡುವುದಿಲ್ಲ. ಅದಕ್ಕಾಗಿ ನನಗೆ ಒಂದೊಂದು ಸಲ ಬೇಸರ ಕೂಡ ಆಗುತ್ತದೆ, ಒಂದೊಂದು ಸಲ ಪ್ರೋತ್ಸಾಹವನ್ನು ಕೊಡಬೇಕೆಂದು ಅನ್ನಿಸುತ್ತದೆ. ಅದರೂ ಒಂದೊಂದು ಸಲ ಹೇಗೆ ಬಂತು, ಎಲ್ಲಿಂದ ಬಂತು ಹೀಗೆ ಹೆರಾಸ್‌ಮೆಂಟ್ ಮಾಡುತ್ತಿದ್ದಾರೆ, ಕಾಂಟ್ರಾಕ್ಟರನ್ನು ಒಂದೊಂದು ಲಾರಿ ಉಸುಕನ್ನು ಕೊಡಿ, ಇಟ್ಟಿಗೆಯನ್ನು ಕೊಡಿ ಎಂದು ಕೇಳುತ್ತಿದ್ದಾರೆಂದು ಕೆಲವು ಆಗರುವರು ಸಣ್ಣದಾಗಿರುವುದನ್ನು ದೊಡ್ಡದಾಗಿ ಮಾಡಿ ಪ್ರಚೋದನೆ ಮಾಡತಕ್ಕಂಥವರು ಕೂಡ ಇದ್ದಾರೆ. ನಾವು ಸ್ವಲ್ಪ ಪೋಲೀಸ್ ಹೌಸಿಂಗ್ ಕಾರ್ಪೊರೇಶನ್‌ನಿಂದ ಪ್ರಯತ್ನವನ್ನು ಪಟ್ಟರೆ ನಮ್ಮಲ್ಲಿರತಕ್ಕಂಥ ಹಣದಲ್ಲಿಯೇ ಇನ್ನೂ ಹೆಚ್ಚಿನ ಕೆಲಸವನ್ನು ಮಾಡಬಹುದು ಎನ್ನುವ ನಂಬಿಕೆ ಕೂಡ ನನ್ನಲ್ಲಿ ಇದೆ. ಮೇಜರ್ ಕೆಲಸ ಇರುವುದರಿಂದ ಇದನ್ನು ನಾವು ಪಿಡಬ್ಲ್ಯೂಡಿಗೆ ವಹಿಸಿರುತ್ತೇವೆ. ಸಣ್ಣ ಪುಟ್ಟ ಇರುವ ಕೆಲಸವನ್ನು ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ರಿಪೇರಿ ಕೆಲಸವನ್ನು ನಾವು ಪೊಲೀಸ್ ಇಲಾಖೆಯ ಮುಖಾಂತರ ಮಾಡುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ ಮಾನ್ಯ ಅಧ್ಯಕ್ಷತೆ, ಇವರ ಸರ್ಕಾರವೇ ಇದ್ದಂಥ ಸಂದರ್ಭದಲ್ಲಿ, ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಬಂಗಾರಪ್ಪನವರು ಪೊಲೀಸ್ ಇಲಾಖೆಗೆ ಬಹಳ ಒತ್ತನ್ನು ಕೊಟ್ಟು ಎರಡು ವರ್ಷಗಳ ಅವಧಿಯಲ್ಲಿ ಸುಮಾರು 250 ಕೋಟಿ ರೂಪಾಯಿಗಳನ್ನು ಆಗ ಗೃಹ ಮಂತ್ರಿಗಳಾಗಿದ್ದ ಮಾನ್ಯ ಧರ್ಮಸಿಂಗ್‌ರವರಿಂದ ಹಣ ಬಿಡುಗಡೆಯಾಯಿತು. ಆದು ಆದನಂತರ ಸ್ವಲ್ಪ ಪೊಲೀಸರ ವೇಕೆನ್ಸಿಗಳಿಗೆ ದುಡ್ಡು, ವಸತಿ ಗೃಹಗಳಿಗೆ ಆಧುನೀಕರಣ ಹಾಗೂ ಹೊಸದಾಗಿ ಮನೆಗಳನ್ನು ಕಟ್ಟಲಿಕ್ಕೆ ಆಗಿರತಕ್ಕಂಥದ್ದು ಎಂದರೆ ಮಾನ್ಯ ಪಟೇಲರ ಕಾಲದಲ್ಲಿ. ಮಧ್ಯದಲ್ಲಿ ಕೆಲಸಗಳು ಆಗಿಲ್ಲ. ತಾವು ಸುಮಾರು 30 ವರ್ಷಗಳಿಂದ ಇದ್ದೀರಿ, ತಾವು ಅನುಭವವನ್ನು ಪಡೆದವರಾಗಿದ್ದೀರಿ. ಪೋಲೀಸರ ಮನೋಧೈರ್ಯ ಯಾವರೀತಿ ಇದೆ ಎಂದರೆ, ಸುಮಾರು 3-4 ತಿಂಗಳುಗಳಿಂದ ಅಕ್ಕಿಯನ್ನು ಕೂಡ ಕೊಟ್ಟಿರುವುದಿಲ್ಲ. ಸಕ್ಕರೆಯನ್ನು ಕೂಡ ಕೊಟ್ಟಿಲ್ಲವೆಂದು ಅವರು ಅಳುತ್ತಿದ್ದಾರೆ. ಇತ್ತಿತ್ತಲಾಗಿ 24 ಗಂಟೆ ಕೂಡ ಕೆಲಸ ಮಾಡಬೇಕೆನ್ನುವುದು ಕೂಡ ತಮಗೆ ಗೊತ್ತಿದೆ. ತಮ್ಮ ಕಾಲದಲ್ಲಿ, ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಸ್ಥಾನ ಬಲದಿಂದ ಈ ಬಜೆಟ್‌ನಲ್ಲಿ ಅದಕ್ಕೆ ಹೆಚ್ಚಿನ ಹಣ ಏನು ಸಿಕ್ಕಿಲ್ಲ. ತಾವು ಸಪ್ಲಿಮೆಂಟರಿ ಬಜೆಟ್ ತೆಗೆದುಕೊಂಡು ಬಂದು, 150 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಆದನ್ನು ಮಾಡರ್ನೈಸ್ ಮಾಡುವುದಕ್ಕೆ ಹಾಗೂ ವಸತಿ ಗೃಹಗಳನ್ನು ಕಟ್ಟುವುದಕ್ಕೆ ಯೋಜನೆಯನ್ನು ತಯಾರು ಮಾಡುವುದರ ಜೊತೆಗೆ ಇದಕ್ಕೆ ಮಂಜೂರಾತಿಯನ್ನು ಪಡೆಯಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸಿಂಧ್ಯಾರವರು ಈ ಕಡೆ ಗಮನವನ್ನು ಕೊಟ್ಟಿಲ್ಲವೆಂದು ಕಾಣುತ್ತದೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ, ತಾವು ಈ ಇಲಾಖೆಯ ಕಡೆ ಸ್ವಲ್ಪ ಗಮನವನ್ನು ಕೊಟ್ಟಿದ್ದರೆ ಗೊತ್ತಾಗುತ್ತಿತ್ತು. ಸುಮಾರು 4 ವಿಭಾಗಗಳಲ್ಲಿ ನಾವು ಟೆಂಡರ್‌ಗಳನ್ನು ಕರೆದು 5 ಸಾವಿರ ಮನೆಗಳನ್ನು ಏಕಕಾಲದಲ್ಲಿ ಕಟ್ಟತಕ್ಕಂಥದ್ದು ಇದು ಇತಿಹಾಸದಲ್ಲಿ ಮೊದಲನೆಯ ಸಲವೆಂದು ಹೇಳಬಹುದು. ಈಗ ಕೆಲಸ ಪ್ರಾರಂಭವಾಗುತ್ತಿದೆ, ಬಹುಶಃ ತಮ್ಮ ಭಾಗದಲ್ಲಿ ಕೂಡ ತಮ್ಮನ್ನು ಕರೆಸಿ ಭೂಮಿ ಪೂಜೆಯನ್ನು ಮಾಡಿಸುತ್ತಾರೆ. ಇದು ಸುಮಾರು 120 ಕೋಟಿ ರೂಪಾಯಿಗಳ ಕೆಲಸ, ಹುಡ್ಕೋದಿಂದ ಹಣವನ್ನು ತೆಗೆದುಕೊಂಡು ಇದನ್ನು ಪ್ರಾರಂಭ ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ಮೊನ್ನೆ 82 ಕೋಟಿ ರೂಪಾಯಿಗಳು ಆಧುನೀಕರಣಕ್ಕೆ ಹಣ ಬಂದಿದೆ. ನಮ್ಮದು 82 ಕೋಟಿ ರೂಪಾಯಿ ಮ್ಯಾಚಿಂಗ್ ಗ್ರಾಂಟ್ ಸೇರಿಸಿ ಕನ್‌ಸ್ಟ್ರಕ್ಷನ್ ಆಫ್ ಹೌಸಿಂಗ್ಸ್‌ಗೆ ನಾವು ಒತ್ತು ಕೊಡುತ್ತಿದ್ದೇವೆ. ಈಗ ನಮ್ಮ ಗುರಿ ಏನಿದೆ ಎಂದರೆ, ಯಾವ ಯಾವ ಪೊಲೀಸ್ ಸ್ಟೇಶನ್‌ನಲ್ಲಿ ವೆಹಿಕಲ್ ಇಲ್ಲ, ಮೊಬಿಲಿಟಿಗೋಸ್ಕರ ಪ್ರತಿಯೊಂದು ಪೊಲೀಸ್ ಸ್ಟೇಶನ್‌ಗೆ ವೆಹಿಕಲ್‌ನ್ನು ಕೊಡಬೇಕೆಂದು ನಿರ್ಧಾರ ಮಾಡಿರುತ್ತೇವೆ. ಕರ್ನಾಟಕ ರಾಜ್ಯದಲ್ಲಿರುವ ಸುಮಾರು 200 ಪೋಲೀಸ್ ಸ್ಟೇಶನ್‌ನಲ್ಲಿ ವಾಹನ ಸೌಕರ್ಯವಿಲ್ಲದೆ ಅಡ್ಡಾಡುತ್ತಿದ್ದಾರೆ, ಅವರೆಲ್ಲರಿಗೂ ಸಹ ವಾಹನ ಸೌಕರ್ಯವನ್ನು ಕೋಡುತ್ತೇವೆ. ಎಲ್ಲೆಲ್ಲಿ ಆಫೀಸ್‌ಗಳು ಇಲ್ಲ, ಹೊಸ ಜಿಲ್ಲೆಗಳನ್ನು ತಮ್ಮ ಸರ್ಕಾರ ಇದ್ದಾಗ ಮಾಡಿರುತ್ತೀರಿ, ಅದಕ್ಕಾಗಿ ತಮಗೆ ಧನ್ಯವಾದಗಳು. ನನ್ನ ಒಂದು ಜಿಲ್ಲೆಯನ್ನು ಬಿಟ್ಟು ತಾವು ಎಲ್ಲವನ್ನು ಮಾಡಿರುತ್ತೀರಿ. ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ನನ್ನ ದುರ್ದೈವದಿಂದ ಆಗಿರಲಿಕ್ಕಿಲ್ಲ. ಹೊಸ ಜಿಲ್ಲೆಗಳು ಏನಿವೆ, ಮಾನ್ಯ ಎಸ್.ಸ್. ಪಾಟೀಲರವರ ಜಿಲ್ಲೆ ಸೇರಿಕೊಂಡು, ಜಿಲ್ಲಾ ಮಟ್ಟದಲ್ಲಿ ಆಫೀಸ್ ಕಾಂಪ್ಲೆಕ್ಸ್ ಕಟ್ಟುವುದಕ್ಕೆ 120 ಕೋಟಿ ರೂಪಾಯಿಗಳ ಮಂಜೂರಾತಿಯನ್ನು ನಾವು ತೆಗೆದುಕೊಂಡಿದ್ದೇವೆ. ಈಗಾಗಲೇ ನಾವು ಮುಖ್ಯವಾಸು ಶಿಲ್ಪಿಯವರಿಗೆ ಹೇಳಿದ್ದೇವೆ. ಎಸ್‌ಪಿ ಆಫೀಸ್ ಆಗಿರಬಹುದು, ಡಿವೈಎಸ್‌ಪಿ ಆಫೀಸ್ ಆಗಿರಬಹುದು, ಅವರಿಗೆವಸತಿ ಆಗಿರಬಹುದು, ವ್ಯವಸ್ಥೆಯನ್ನು ಯಾವ ರೀತಿಯಾಗಿ ಮಾಡಬೇಕು, ಅದನ್ನು ಮಾಡಬೇಕೆಂದು ಮುಖ್ಯವಾಸ್ತು ಶಿಲ್ಪಿಯವರಿಗೆ ಕೇಳಿಕೊಂಡಿದ್ದೇವೆ. ಆ ವಾಸ್ತುಶಿಲ್ಪಿಯವರು ಆ ನೀಲಿನಕ್ಷೆಯನ್ನು ಮಾಡಿಕೊಟ್ಟ ಮೇಲೆ ಖಂಡಿತವಾಗಿ ಎಲ್ಲ ಕಡೆ ಪೊಲೀಸ್ ಸ್ಟೇಶನ್ ಹಾಗೂ ಜಿಲ್ಲಾ ಕಾಂಪ್ಲೆಕ್ಸ್‌ಗಳು ಬರುತ್ತವೆ. ಇಷ್ಟೊಂದು ಹಣ ಯಾವ ಕಾಲದಲ್ಲಿ ಸಿಕ್ಕಿತ್ತು ಎನ್ನುವುದನ್ನು ತಾವು ಹೇಳಬೇಕು. ತಾವು ಹೇಳಿದಂತೆ ನಾನು ಒಪ್ಪಿಕೊಳ್ಳುತ್ತೇನೆ ತಾವು ಮೊನ್ನೆ ಹಾಗೂ ಇವತ್ತು ಹೇಳಿದಂತೆ ಪೊಲೀಸರಿಗೆ 3-4 ತಿಂಗಳಿಂದ ಫುಡ್ ಸಿಕ್ಕಿಲ್ಲವೆಂದು, ಆದರ ಬಗ್ಗೆ ನಾನು ವೆರಿಫೈ ಮಾಡಿ ರಿವ್ಯೂ ಮಾಡಿದ ಮೇಲೆ ಡಿಸೆಂಬರ್ ಕೊನೆಯವರಿಗೆ ಕೊಟ್ಟಿದ್ದಾರೆ. ಇನ್ನು ಜನವರಿ-ಫೆಬ್ರವರಿ ತಿಂಗಳು ಕೊಡಬೇಕು, ಇದು ಮಾರ್ಚಿ ತಿಂಗಳು, ಮಾರ್ಚಿ ತಿಂಗಳ ಕೊನೆಗೆ ಎಲ್ಲರೂ ಕೂಡ ಕಾಯುತ್ತಿದ್ದಾರೆ. ಅದಕ್ಕೆ ಇನ್ನು ಒಂದುಕೊಟಿ ಇಪ್ಪತ್ತು ಲಕ್ಷ ರೂಪಾಯಿಗಳು ಬೇಕು. ಆ 1 ಕೋಟಿ 20 ಲಕ್ಷ ರೂಪಾಯಿಗಳನ್ನು ನಾವು ಫುಡ್ ಕಾರ್ಪೊರೇಶನ್ ಆಫ್ ಇಂಡಿಯಾ ಸಂಸ್ಥೆಗೆ ತುಂಬಿದ ನಂತರ ಅವರು ಅದನ್ನು ಬಿಡುಗಡೆ ಮಾಡುತ್ತಾರೆ. ಅದಕ್ಕೆ ಏನು ತೊಂದರೆ ಇಲ್ಲ. ಆಧುನೀಕರಣ, ಮೊಬಿಲಿಟಿ, ವೆಹಿಕಲ್ ಹಾಗೂ ಇಕ್ಯುಪ್‌ಮೆಂಟ್ ತರುವುದನ್ನು ಮಾಡುವುದಲ್ಲದೆ, ತಾವು ಮೊನ್ನೆ ಪ್ರಸ್ತಾಪ ಮಾಡಿದಂತೆ, Forensic ಬಗ್ಗೆ, ಏನಾದರೂ ಒಂದು ಘಟನೆ ನಡೆದರೆ ಅದನ್ನು ಬೆಂಗಳೂರಿಗೆ ಕಳುಹಿಸಿಕೊಡುತ್ತಾರೆ. ಬೆಳಗಾಂ ಹಾಗೂ ಗುಲ್ಬರ್ಗಾದಲ್ಲಿ forensic

laboratory ಸ್ಥಾಪನೆ ಮಾಡಬೇಕೆಂದು, ಅದಕ್ಕೂ ಕೂಡ ನಾವು 25 ಲಕ್ಷ ರೂಪಾಯಿಗಳನ್ನು ಮಂಜೂರಾತಿ ಮಾಡಿ ಬಿಡುಗಡೆ ಮಾಡಿದ್ದೇವೆ. ಅದು ಲ್ಯಾಂಡ್ ಆರ್ಮಿಯವರು ಆ ಕೆಲಸವನ್ನು ಪ್ರಾರಂಭ ಮಾಡುತ್ತಾರೆ. ಇದನ್ನು ಕೇಳಿದ ಮೇಲೆ ಮಾನ್ಯ ಸಿಂಧ್ಯಾರವರು ಸ್ಯಾಟಿಸ್‌ಫೈ ಆಗಿರಬಹುದೆಂದು ಭಾವಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಇವರು ಪೊಲೀಸ್‌ರಿಗೆ ಎಷ್ಟು ಸಹಾಯವನ್ನು ಮಾಡುತ್ತಾರೋ ಅಷ್ಟು ಇವರಿಗೆ ಬೇಗ ಪದೋನ್ನತಿ ಸಿಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಖರ್ಗೆಯವರು ಹೇಳಿದಂತೆ, ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ ಹಾಗೂ ರಾಜ್ಯ ಸರ್ಕಾರದಿಂದ ಹಣವನ್ನು ಹಾಕಿ ಏನೋ ಬದಲಾವಣೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಕೆಂಪಯ್ಯನಂತಹ ಆಫೀಸರು ಇದ್ದಲ್ಲಿ ಸಮಾಜದಿಂದ ಹಣ ಸಂಗ್ರಹವನ್ನು ಮಾಡಿ ಏನೋ ಮಾಡುತ್ತಾರೆ. ಹಳ್ಳಿಗಳಲ್ಲಿ ಪೊಲೀಸ್ ಸ್ಟೇಶನ್ ಇವೆ, ಅವು ಕೋಳಿಗೂಡಿನ ಮನೆಗಳ ತರಹ ಆಗಿ ಹೋಗಿಬಿಟ್ಟಿವೆ. ಅವುಗಳನ್ನು ಸರಿ ಮಾಡಿಸಿ, ಪೊಲೀಸರು ಮನೆಗೆ ಹೋದಾಗ ಕಾಲುಚಾಚಿ ಮಲಗುವಂಥ ಒಂದು ನಿವೇಶನವನ್ನು ಅವರಿಗೆ ಕೊಡಿ. ಅವರಿಗೆ ನಿದ್ರೆ ಮಾಡುವುದಕ್ಕೆ ಸಿಗುವ ಸಮಯ ಕೂಡ ಕಡಿಮೆ. ಡ್ಯೂಟಿ ಮಾಡುತ್ತಾ ಮೋರಿ ಅಥವಾ ಚರಂಡಿಗಳ ಪಕ್ಕದಲ್ಲಿ ಮಲಗುವ ಪರಿಸ್ಥಿತಿ ಇದೆ. ಅದಕ್ಕಾಗಿ ಗ್ರಾಮೀಣ ಪ್ರದೇಶಗಳಲ್ಲಿ ತಾವು ವಸತಿ ಹಾಗೂ ಪೊಲೀಸ್ ಸ್ಟೇಶನ್‌ಗಳಿಗೆ ಒಂದು ಅವಕಾಶ ಮಾಡಿಕೊಡಬೇಕು. ಹಣವನ್ನು ಸಂಗ್ರಹ ಮಾಡಿ ಜೇಬಿಗೆ ಸೇರಿಸುವಂಥ ಜನ ಜಾಸ್ತಿ ಇರುವಾಗ, ಕೆಂಪಯ್ಯನವರಂತಹ ಒಳ್ಳೆಯ ಆಫೀಸರ್‌ಗಳಿಗೆ ಒಂದು ಅವಾರ್ಡನ್ನು ಡಿಕ್ಲೇರ್ ಮಾಡಬೇಕು, ಅಂತಹ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಡಬೇಕೆಂದು ನನ್ನ ವಿನಂತಿಯಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಇವು ಹಳ್ಳಿಗಳಲ್ಲಿ ಆಗತಕ್ಕಂಥವುಗಳು. 5110 ಮನೆಗಳನ್ನು ನಾವು ಕಟ್ಟಿಸುತ್ತಿದ್ದೇವೆ. ಗುಲ್ಬರ್ಗಾ, ಬೆಳಗಾಂ, ಮೈಸೂರು ಹಾಗೂ ಬೆಂಗಳೂರು ಡಿವಿಜನ್‌ಗಳಲ್ಲಿ ಮಾಡುತ್ತಿದ್ದೇವೆ. ಯಾವ ಯಾವ ಪೊಲೀಸ್ ಸ್ಟೇಶನ್‌ಗಳ ಏರಿಯಾದಲ್ಲಿ ರೆಸಿಡೆನ್ಸಿಯಲ್ ಕ್ವಾರ್ಟರ್ಸ್ ಇರುವುದಿಲ್ಲ ಅವರಿಗೆ ಕೊಡುತ್ತೇವೆ. ನಾನು ರೆಸಿಡೆನ್ಸಿಯಲ್ ಕ್ವಾರ್ಟರ್ಸ್ ಏರಿಯಾದಲ್ಲಿ ಪೊಲೀಸ್ ಸ್ಟೇಶನ್‌ಗಳನ್ನು ಕಟ್ಟಿಸುವುದಾಗಿದೆ. ನಾನು ಈಗಾಗಲೇ ಎಸ್‌ಪಿ ಯವರಿಗೆ ಆದೇಶವನ್ನು ಕೊಟ್ಟ ಪ್ರಕಾರ ಅವರು 1200 ಹೌಸಿಂಗ್ ಬೋರ್ಡ್ ಚೆನ್ನಾಗಿರುವ ಮನೆಗಳನ್ನು ಗುರ್ತಿಸಿ ವರದಿಯನ್ನು ಕೊಟ್ಟಿರುವುದರಿಂದ ಅವುಗಳಿಗೆ 26 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಮನೆಗಳನ್ನು ಪರ್ಚೇಸ್ ಮಾಡಿದ್ದೇವೆ. ಏಕೆಂದರೆ ಚೆನ್ನಾಗಿ ಇಲ್ಲದಿರುವ ಮನೆಗಳನ್ನು ನಾವು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕಾಗಿಯೇ ಸಿಬ್ಬಂದಿಗಳು ವಾಸಮಾಡುವುದಕ್ಕೆ ಯೋಗ್ಯವಾಗಿರತಕ್ಕಂಥ ಸುಮಾರು 1200 ಮನೆಗಳನ್ನು ಈಗಾಗಲೇ ಗುರುತಿಸಲಾಗಿದ್ದು, ಇದಕ್ಕಾಗಿ 26 ಕೋಟಿ ರೂಪಾಯಿಗಳನ್ನು ಹೌಸಿಂಗ್‌ಬೋರ್ಡ್‌ಗೆ ರೆಮಿಟ್ ಮಾಡಿದ್ದೇವೆ. ಇಷ್ಟೊಂದು ಮನೆಗಳು ನಮಗೆ ತಕ್ಷಣವೇ ಸಿಕ್ಕಿವೆ. ಒಟ್ಟು ಸುಮಾರು 6 ಸಾವಿರ ಮನೆಗಳು ಒಂದು ವರ್ಷದಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ಸಿಗುತ್ತವೆ ಎನ್ನತಕ್ಕಂಥ ಮಾತನ್ನು ಇಲ್ಲಿ ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಕೆಲವು ಕಡೆ ಯಾವುದೋ ಕಾಲದಲ್ಲಿ

ಕಟ್ಟಿರತಕ್ಕಂಥ ಕಟ್ಟಡಗಳು ರಿಪೇರಿ ಮತ್ತು ತೊಂದರೆ ಇರತಕ್ಕಂಥದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇನ್ನು ಮುಂದೆ ಹೊಸ ಮನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಟ್ಟಿಸಲಾಗುತ್ತದೆ.

ಶ್ರೀ ಸಿ. ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ಕಟ್ಟಿಸಿಕೊಡುತ್ತೇವೆಂದು ಸನ್ಮಾನ್ಯ ಗೃಹ ಸಚಿವರು ಹೇಳಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತಿನದಿವಸ ತುಮಕೂರು ಜಿಲ್ಲೆಯಲ್ಲಿರತಕ್ಕಂಥ 13 ತಾಲ್ಲೂಕುಗಳಲ್ಲಿ 7 ತಾಲ್ಲೂಕುಗಳಲ್ಲಿ ಪೊಲೀಸ್ ವಸತಿ ಗೃಹಗಳಿಲ್ಲ. ಮತ್ತೆ 40 ರಿಂದ 45 ಜನ ಕೆಲಸ ಮಾಡತಕ್ಕಂಥ ಸ್ಥಳಗಳಲ್ಲಿ ಕೇವಲ 8 ರಿಂದ 10 ವಸತಿ ಗೃಹಗಳಿವೆ. ಹಾಗೆಯೇ ಪೊಲೀಸ್ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅನುಕೂಲವನ್ನು ಮಾಡಿಕೊಡುವುದರ ಜೊತೆಗೆ ಇವತ್ತಿನದಿವಸ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕೋರ್ಸ್ ಮಾಡುವುದಕ್ಕೆ ಉಚಿತವಾದ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ವಿನಂತಿಮಾಡಿಕೊಳ್ಳುತ್ತೇನೆ. ಹಾಗೆಯೇ ಸುಮಾರು 22 ವರ್ಷಗಳ ಕಾಲ ಪೊಲೀಸ್ ಮತ್ತು ಹೆಡ್ ಕಾನ್‌ಸ್ಟೇಬಲ್ ಹಾಗೂ ಸಬ್ ಇನ್‌ಸ್ಪೆಕ್ಟರ್ ಕಾರ್ಯನಿರ್ವಹಿಸಿರುವ ಅನೇಕ ವ್ಯಕ್ತಿಗಳಿಗೆ ಇನ್ನು ಬಡ್ತಿ ಕೊಟ್ಟಿಲ್ಲ. ಇವರು ಇನ್‌ಸ್ಪೆಕ್ಟರ್ ಮತ್ತು ಡಿ.ಎಸ್.ಪಿ. ಹುದ್ದೆಯವರೆಗೆ ಬಡ್ತಿ ಮೂಲಕ ಹೋಗಬಹುದಾಗಿದೆ. ಆದ್ದರಿಂದ ಈ ವಿಷಯದ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನೆಂಬುದನ್ನು ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತುಮಕೂರಿನಲ್ಲಿರತಕ್ಕಂಥ ಡಿಸ್ಟ್ರಿಕ್ಟ್ ಪೊಲೀಸ್ ಆಫೀಸ್ ತಂಬಾ ಹಳೆಯ ಕಟ್ಟಡದಲ್ಲಿದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಹೋದ ಸಲ ಅಲ್ಲಿಗೆ ಭೇಟಿ ನೀಡಿದಂಥ ಸಂದರ್ಭದಲ್ಲಿ ಇದಕ್ಕಾಗಿ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದ್ದು, ಈಗ ಕೆಲಸ ಕೂಡ ಪ್ರಾರಂಭವಾಗಿದೆ. ಇದು ಮಾನ್ಯ ಚೆನ್ನಿಗಪ್ಪನವರಿಗೂ ಸಹ ಗೊತ್ತು. ಈಗಾಗಲೇ ಸುಮಾರು 25 ರಿಂದ 30 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿದ್ದೇವೆ. ಈ ವರ್ಷ ಹೆಚ್ಚಿಗೆ ಹಣ ಕೊಡಬೇಕೆಂದು ಅವರು ಕೇಳಿಕೊಂಡಿದ್ದಾರೆ. ಆ ಕೆಲಸವನ್ನು ನಾವು ಮಾಡುತ್ತೇವೆ. ಇನ್ನು ತಾಲ್ಲೂಕು ಮಟ್ಟದಲ್ಲಿ ಕಟ್ಟಡ ನಿರ್ಮಾಣ ಮಾಡಬೇಕೆಂದು ತಾವು ಪ್ರಸ್ತಾಪ ಮಾಡಿದ್ದೀರಿ. ನಮ್ಮ ಡಿವಿಜನ್‌ವೈಸ್ ಆಕ್ಷನ್ ಪ್ಲಾನ್‌ನಲ್ಲಿ ತುಮಕೂರು ಜಿಲ್ಲೆಯೂ ಕೂಡ ಸೇರಿದೆ. ಒಂದೇ ಸಾರಿ ಎಲ್ಲಾ ಕಡೆ ಆಗದೇ ಇರಬಹುದು. ಆದರೆ ಕೆಲವು ಪ್ರಮುಖವಾದಂಥ ಜಿಲ್ಲೆಗಳ ತಾಲ್ಲೂಕುಗಳಲ್ಲಿ ಪೊಲೀಸ್ ಕ್ವಾರ್ಟರ್ಸ್‌ನ ನಿರ್ಮಾಣ ಮಾಡತಕ್ಕಂಥದ್ದನ್ನು ನಾವು ಖಂಡಿತ ಮಾಡುತ್ತೇವೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್: ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಬಾರ್ ಲೈನ್ ಎನ್ನತಕ್ಕಂಥ ಕಟ್ಟಡ ಬ್ರಿಟಿಷ್‌ರವರು ಕಟ್ಟಿದಂಥ ಕಟ್ಟಡವಾಗಿದೆ. ಈ ಮನೆಗಳು ಕೇವಲ ಎರಡೂವರೆ ಚದುರ ವಿಸ್ತೀರ್ಣ ಇದೆ. ಆದರೆ, ಇದರಲ್ಲಿರತಕ್ಕಂಥ ಕಟ್ಟಡಗಳು ಬೀಳ್ತಾಗಿದ್ದರೂ ಸಹ ವಾಸ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಆದ್ದರಿಂದ ಎರಡು ಮನೆಗಳನ್ನು ಸೇರಿ ಒಂದು ಮನೆ ಮಾಡಿಕೊಡತಕ್ಕಂಥ ವ್ಯವಸ್ಥೆಯಾಗಬೇಕು. ಹಾಗೆಯೇ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿರತಕ್ಕಂಥ ಮನೆಗಳು ಸುಮಾರು ನಾಲ್ಕು ವರ್ಷಗಳಿಂದ ನಿರ್ಮಾಣ ಹಂತದಲ್ಲಿಯೆ ಇದೆ. ಈ ಮನೆಗಳಲ್ಲಿ ಗಿಡಗಳು ಬೆಳೆದುಕೊಂಡು ಒಂದು ರೀತಿ ಪಾಳು ಮನೆಗಳಂತೆ ಇವೆ. ಆದ್ದರಿಂದ ಸದರಿ ಕಟ್ಟಡಗಳ ಕೆಲಸ ಆದಷ್ಟು ಬೇಗ ಮುಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಸರ್ಕಾರ ಇವುಗಳ ಬಗ್ಗೆ ಗಮನ ಹರಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಎರಡು ಮನೆಗಳನ್ನು ಸೇರಿಸಿ ಒಂದೇ ಮನೆ ಮಾಡಬೇಕೆಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಯಾವರೀತಿಯಾಗಿ ಸದರಿ ಕಟ್ಟಡಗಳನ್ನು ರಿಪೇರಿ ಮಾಡಬೇಕೆಂಬುದರ ಬಗ್ಗೆ ಪರಿಶೀಲಿಸುತ್ತೇನೆ.

ಶ್ರೀ ಎಚ್.ಎಸ್. ಮಹದೇವ್ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಗುಂಡ್ಲುಪೇಟೆಯಲ್ಲಿರತಕ್ಕಂಥ ಪೊಲೀಸ್ ಸ್ಟೇಷನ್‌ಗಳನ್ನು ಸ್ವಲ್ಪ ಸ್ಟ್ರೆಂಥನ್ ಮಾಡಬೇಕಾಗಿದೆ. ಮತ್ತೆ ಕೆಲವು ಕಟ್ಟಡಗಳು ಬಹಳ ಶಿಥಿಲವಾಗಿದೆ. ಹಾಗೆಯೇ, ತೆರಕಣಾಂಬಿ ಮತ್ತು ಇತರೇ ಕೆಲವು ಕಡೆ ಬೇರೆಯವರಿಂದ ಪೊಲೀಸ್ ಸ್ಟೇಷನ್ ಮೇಲೆ ಅಟ್ಯಾಕ್ ಮಾಡಿರತಕ್ಕಂಥ ಎರಡು-ಮೂರು ಘಟನೆಗಳು ನಡೆದಿವೆ. ಕೆಲವು ಏರಿಯಾಗಳನ್ನು ವೀರಪ್ಪನ್ ಏರಿಯಾ ಎಂದು ತಾವೇ ಡಿಕ್ಲೇರ್ ಮಾಡಿದ್ದೀರಿ. ಆದ್ದರಿಂದ ಇಲ್ಲಿರತಕ್ಕಂಥ ಪೊಲೀಸ್ ಸ್ಟೇಷನ್ ಸುತ್ತ ಎತ್ತರವಾದ ಗೋಡೆಯನ್ನು ಕಟ್ಟಿಸಬೇಕೆಂದು ಅಲ್ಲಿನ ಇನ್‌ಸ್ಪೆಕ್ಟರ್‌ಗಳು ನಮಗೆ ಮನವಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ಇದಕ್ಕೆ ಸರ್ಕಾರ ಹಣ ಒದಗಿಸಬೇಕು. ಇನ್ನು ಊಟಿ ಮತ್ತು ಬಂಡೀಪುರಕ್ಕೆ ನಮ್ಮ ಕ್ಷೇತ್ರದಿಂದಲೇ ಹೋಗಬೇಕಾಗಿದ್ದು, ಈಗ ಬೇಸಿಗೆ ಕಾಲವಾಗಿರುವುದರಿಂದ ಬಹಳಷ್ಟು ಜನ ಗಣ್ಯ ವ್ಯಕ್ತಿಗಳು ಊಟಿ ಮತ್ತು ಬಂಡೀಪುರಕ್ಕೆ ಹೋಗುತ್ತಿರುತ್ತಾರೆ. ಈ ಸಂದರ್ಭದಲ್ಲಿ ಇವರಿಗೆ ನಮ್ಮ ಬಾರ್ಡರ್‌ನಿಂದ ಸ್ಟೇಟ್ ಬಾರ್ಡರ್‌ವರೆಗೆ ಎಸ್ಕಾರ್ಟ್ ಕೊಡಬೇಕಾಗಿದೆ. ಈ ಒಂದು ಕೆಲಸಕ್ಕಾಗಿ ಈಗ ಉಪಯೋಗಿಸತಕ್ಕಂಥ ಜೀಪ್ ಸುಮಾರು 40 ರಿಂದ 50 ಕಿ.ಮೀ. ವೇಗದಲ್ಲಿಯೂ ಕೂಡ ಚಲಿಸುವುದಿಲ್ಲ. ಇಂಥ ಸಂದರ್ಭದಲ್ಲಿ ಎಲ್ಲರಿಗೂ ಎಸ್ಕಾರ್ಟ್ ಕೊಡುವುದರಿಂದ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸ್ವಲ್ಪ ನಿಧಾನವಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಹಾಗೆಯೇ ಗುಂಡ್ಲುಪೇಟೆಯಲ್ಲಿರುವ ಸರ್ಕಲ್ ಇನ್‌ಸ್ಪೆಕ್ಟರ್‌ರವರ ಕಛೇರಿಗೆ ಒಂದು ಕಟ್ಟಡ ನಿರ್ಮಾಣ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೆ, ಪೊಲೀಸ್ ಸಿಬ್ಬಂದಿಯವರಿಗೆ ವಸತಿ ಗೃಹಗಳನ್ನು ಕಟ್ಟಿಸಿಕೊಡುತ್ತೇವೆಂದು ಮಾನ್ಯ ಗೃಹ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ತಿಳಿಸಿದ್ದಾರೆ. ಆದ್ದರಿಂದ ಇದಕ್ಕಾಗಿ ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಕೊಪ್ಪಳ ಜಿಲ್ಲೆಯಲ್ಲಿ ಈ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಇದರ ಜೊತೆಗೆ ಕೊಪ್ಪಳ ಹೊಸ ಜಿಲ್ಲೆಯಾಗಿರುವುದರಿಂದ ಇಲ್ಲಿಗೊಂದು ಟ್ರಾಫಿಕ್ ಪೊಲೀಸ್ ಸ್ಟೇಷನ್ ತೆರೆಯುವುದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಏಳೆಂಟು ದಿವಸಗಳ ಹಿಂದೆ ಗಂಗಾವತಿಗೆ ಒಂದು ಟ್ರಾಫಿಕ್ ಪೊಲೀಸ್ ಸ್ಟೇಷನ್‌ನನ್ನು ಕೊಡಲಾಗಿದೆ. ಇವತ್ತಿನದಿವಸ ಕೊಪ್ಪಳಕ್ಕಿಂತ ಗಂಗಾವತಿಯಲ್ಲಿ ಟ್ರಾಫಿಕ್ ಮತ್ತು ವ್ಯಾಪಾರದ ವಹಿವಾಟು ಜಾಸ್ತಿ ಇದೆ. ಆದ್ದರಿಂದ ಮುಂದಿನ ಸಲ ಏನಾದರೂ ಕೆಲವು ಪೋಲೀಸ್ ಸ್ಟೇಷನ್ ಕೊಡತಕ್ಕಂಥ ಸಂದರ್ಭದಲ್ಲಿ ಪ್ರತಿಯೊಂದು ಜಿಲ್ಲೆಗೂ ಕೂಡ ಟ್ರಾಫಿಕ್ ಇನ್‌ಸ್ಪೆಕ್ಟರ್ ಪೋಸ್ಟ್‌ನ್ನು ಕ್ರಿಯೇಟ್ ಮಾಡಿ ಟ್ರಾಫಿಕ್ ಪೊಲೀಸ್ ಸ್ಟೇಷನ್ ಮಾಡುತ್ತೇವೆ. ಇದರಲ್ಲಿ ಕೊಪ್ಪಳ ಮತ್ತು ಕಾರವಾರ ಹಾಗೂ ಚಾಮರಾಜನಗರ

ಮತ್ತು ಇತರ ಜಿಲ್ಲೆಗಳು ಸೇರಿವೆ. ಈಗ ಹೊಸದಾಗಿ ಪೊಲೀಸ್ ಸ್ಟೇಷನ್ ತೆಗೆಯತಕ್ಕಂಥ ಅವಕಾಶ ಇಲ್ಲ. ಮುಂದಿನ ಸಾರಿ ಏನಾದರೂ ಅವಕಾಶ ಸಿಕ್ಕಿದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ಮಂಗಳೂರಿನಲ್ಲಿ ಪೊಲೀಸ್ ಸ್ಟೇಷನ್ ಕಟ್ಟಬೇಕೆಂದು ಸುಮಾರು 15 ವರ್ಷಗಳ ಹಿಂದೆಯೇ ಜಾಗವನ್ನು ಕಾಯ್ದಿರಿಸಲಾಗಿದೆ. ಇದನ್ನು ತಾವು ಕೂಡ ವೀಕ್ಷಣೆ ಮಾಡಿದ್ದೀರಿ. ಆದ್ದರಿಂದ ಈ ಸಾರಿ ಸದರಿ ಕಟ್ಟಡ ನಿರ್ಮಾಣಕ್ಕೆ ಹಣವನ್ನು ಮಂಜೂರಾತಿ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಗುಪ್ತಾಚಾರ ಇಲಾಖೆಯ ಅಧಿಕಾರಿಗಳು ಇವತ್ತಿನದಿವಸ ಸೈಕಲ್ ಮತ್ತು ಮೊಪೆಡ್‌ನಲ್ಲಿ ಓಡಾಡುತ್ತಿದ್ದಾರೆ. ಹಾಗೆಯೇ ಕುಡಿಯುವ ನೀರಿನ ತೀವ್ರ ಸಮಸ್ಯೆ ಇದೆ. ಆದ್ದರಿಂದ ಇದಕ್ಕೆ ವಿಶೇಷವಾದಂಥ ಗ್ರ್ಯಾಂಟ್ ಬಿಡುಗಡೆ ಮಾಡಿ ಈ ಕೆಲಸಗಳನ್ನು ಮಾಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಎಲ್ಲೆಲ್ಲಿ ಸಾಧ್ಯವಿದೆಯೋ ಅಂಥ ಕಡೆ ಈಗಾಗಲೇ ರಿಪೇರಿ ಕಾರ್ಯ ನಡೆಯುತ್ತಿದೆ. ಇದು ಮಾನ್ಯ ಸದಸ್ಯರಿಗೂ ಸಹ ಗೊತ್ತಿದೆ. ಹಾಗೆಯೇ ಇನ್‌ಸ್ಪೆಕ್ಟರ್ಸ್ ಮತ್ತು ಪೊಲೀಸ್ ಕಾನ್‌ಸ್ಟೇಬಲ್‌ಗಳು ಸೈಕಲ್ ಮತ್ತು ಮೊಪೆಡ್‌ನಲ್ಲಿ ಹೋಗುತ್ತಾರೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇವರು ಎಲ್ಲೆಲ್ಲಿಗೆ ಯಾವ ದಾರಿಯಲ್ಲಿ ಮತ್ತು ಯಾವುದರಲ್ಲಿ ಹೋಗಬೇಕೆಂದು ನಮ್ಮ ಗುಪ್ತಚಾರ ಇಲಾಖೆ ತಿಳಿಸಿರುತ್ತದೆ. ಏಕೆಂದರೆ, ಮಾಹಿತಿ ಸಂಗ್ರಹಣೆ ಮಾಡುವುದಕ್ಕೆ ಕೆಲವು ಸಂದರ್ಭಗಳಲ್ಲಿ ಜೀಪ್ ಮತ್ತು ಸೈಕಲ್‌ಗಳಲ್ಲಿ ಹೋಗಬೇಕಾಗುತ್ತದೆ. ಒಟ್ಟಿನಲ್ಲಿ ಅವರಿಗೆ ಅನುಕೂಲವಾಗುವ ಸೌಲಭ್ಯ ಕೊಟ್ಟಿರುತ್ತಾರೆ. ಇದರಿಂದ, ಇದರ ಬಗ್ಗೆ ನಾನೇನು ಹೇಳುವುದಕ್ಕೆ ಆಗುವುದಿಲ್ಲ. ರಿಪೇರಿ ಕೆಲಸ ಮಾಡಿಸುವುದಕ್ಕಾಗಿ ಪಾರ್ಲಿಮೆಂಟ್ ಸದಸ್ಯರಿಂದ ಸ್ವಲ್ಪ ಹಣವನ್ನು ತಾವು ಕೊಡಿಸಬೇಕು. ಬೇರೆ ಕೆಲಸಕ್ಕಾಗಿ ಹಣವನ್ನು ಕೊಡಿಸುತ್ತಿದ್ದೀರಿ. ಆದ್ದರಿಂದ ದಯವಿಟ್ಟು ಇಂಥ ರಿಪೇರಿ ಕೆಲಸಕ್ಕೆ ಮತ್ತು ಹೊಸ ಕಟ್ಟಡಗಳ ನಿರ್ಮಾಣಕ್ಕೆ ಹಣ ಕೊಟ್ಟರೆ ಸ್ವಲ್ಪ ಅನುಕೂಲವಾಗುತ್ತದೆಂದು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೊಸ ಪೊಲೀಸ್‌ಸ್ಟೇಷನ್ ಮಂಜೂರಾತಿ ಆಗಿರುವ ಕಡೆ ಕಟ್ಟಡವನ್ನು ಕಟ್ಟುವುದಕ್ಕೆ ಹಣವನ್ನು ಕೊಡಬೇಕೆಂದು ನಾನು ಈಗಾಗಲೇ ಪಾರ್ಲಿಮೆಂಟ್ ಸದಸ್ಯರಿಗೆ ಪತ್ರ ಬರೆದು ತಿಳಿಸಿದ್ದೇನೆ. ಆದರೆ ಇದುವರೆಗೂ ಒಬ್ಬರಿಂದಲೂ ಸಹ ಉತ್ತರ ಬಂದಿಲ್ಲ. ಇದಕ್ಕೆ ತಾವು ಪ್ರಯತ್ನ ಮಾಡಿದರೆ ಒಂದೆರಡು ಕೆಲಸವಾಗುತ್ತದೆ. ನಮ್ಮ ಮತಿಯಿಂದ ಏನು ಕೊಡಬೇಕೋ ಅದನ್ನು ಖಂಡಿತ ಕೊಡುತ್ತೇವೆ ನಿಮ್ಮ ಮತಿಯಿಂದಲೂ ಸಹ ಸಹಾಯ ಬೇಕಾಗುತ್ತದೆ. ಇದನ್ನು ತಾವು ದಯವಿಟ್ಟು ಮಾಡಬೇಕು.

ಅಧ್ಯಕ್ಷರು: ಕಟ್ಟದ ಬಗ್ಗೆ ರಿಪೇರಿ ಕೆಲಸಕ್ಕೆ ಸಂಬಂಧಪಟ್ಟಂತೆ ಮಾತ್ರ ಪ್ರಶ್ನೆ ಕೇಳಬೇಕೆಂದು ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾಗಡಿ ರೋಡ್ ಪೋಲೀಸ್ ವಸತಿ ಗೃಹಕ್ಕೆ ಸಂಬಂಧಪಟ್ಟಂಥ ಮಾಹಿತಿಗಳು ನನ್ನ ಹತ್ತಿರ ಇದೆ. ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ಮಾಹಿತಿ ನನ್ನ ಹತ್ತಿರ ಇಲ್ಲ. ಆದ್ದರಿಂದ ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗೆ ಪರಿಶೀಲಿಸುತ್ತೇನೆಂದು ಹೇಳಬಹುದಷ್ಟೆ.

ಶ್ರೀ ಕೆ.ಬಿ. ಕೋಳಿವಾಡ್: ಮಾನ್ಯ ಅಧ್ಯಕ್ಷರೆ, ಹಾವೇರಿ ಹೊಸ ಜಿಲ್ಲೆಯಾಗಿದೆ. ಇಲ್ಲಿ ಎಸ್.ಪಿ. ಮತ್ತು ಎ.ಎಸ್.ಪಿ. ಪೋಸ್ಟ್‌ಗಳಿವೆ. ಆದರೆ ಇವರಿಗೆ ಕಛೇರಿ ಮತ್ತು ವಸತಿ ಗೃಹಗಳು ಇಲ್ಲ. ಹಾಗೆಯೇ ರಾಣೆಬೆನ್ನೂರು ಜಿಲ್ಲೆ ಅತ್ಯಂತ ದೊಡ್ಡ ನಗರವಾಗಿದ್ದು, ಇಲ್ಲಿ ಡಿ.ವೈ.ಎಸ್.ಪಿ. ಪೋಸ್ಟ್ ಇದ್ದು, ಇವರಿಗೆ ಕಛೇರಿ ಮತ್ತು ವಸತಿಗೃಹ ಇಲ್ಲ. ಇನ್ನು 8 ಜನ ಸಬ್ ಇನ್‌ಸ್ಪೆಕ್ಟರ್‌ಗಳಿಗೆ ಮನೆ ಇಲ್ಲ ಹಾಗೆಯೇ ಇಬ್ಬರು ಇನ್‌ಸ್ಪೆಕ್ಟರ್ ಇದ್ದು ಇವರಿಗೆ ಕಛೇರಿ ಇದೆ. ಆದರೆ ಒಬ್ಬ ಇನ್‌ಪೆಕ್ಟರ್‌ಗೆ ಮಾತ್ರ ಮನೆ ಇದೆ.

11.50 ಎ.ಎಂ

ಆದ್ದರಿಂದ ಆಫೀಸ್ ಮತ್ತು ಗೃಹ ವಸತಿಗಳಿಗೆ ಆದಷ್ಟು ಬೇಗನೆ ಕಟ್ಟಡಗಳನ್ನು ಒದಗಿಸಿಕೊಡಬೇಕೆಂದು ನಾನು ಮಾನ್ಯ ಗೃಹ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಕೋಳಿವಾಡರವರು ಆಸಕ್ತಿವಹಿಸಿ ಹಾವೇರಿ ಸಿಟಿಯಲ್ಲಿ ಜಾಗವನ್ನು ಕೊಡಿಸಿಕೊಟ್ಟರೆ, ಸ್ಥಳಾವಕಾಶದ ಬಗ್ಗೆ ಜಗಳ ನಡೆದಿದೆ, ಸದ್ಯಕ್ಕೆ ಹೈಸ್ಕೂಲ್ ಜಾಗದಲ್ಲಿ ಎಸ್‌ಪಿ ಆಫೀಸ್ ಇರುತ್ತದೆ. ಅವರು ಸ್ಥಳಾವಕಾಶವನ್ನು ಒದಗಿಸಿಕೊಟ್ಟರೆ, ಕೆಲವು ಕ್ವಾರ್ಟರ್ಸ್‌ಗಳನ್ನು ಮಾತ್ರ, ಎಲ್ಲ ಕ್ವಾರ್ಟರ್ಸ್‌ಗಳು ಎಂದು ನಾನು ಹೇಳುವುದಿಲ್ಲ, ಎಸ್‌ಪಿ ಹಾಗೂ ಡಿವೈಎಸ್‌ಪಿ ಆಫೀಸ್ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಆಫೀಸ್‌ಗಳನ್ನು ಕಟ್ಟಿಸಿಕೊಡತಕ್ಕಂಥ ಜವಾಬ್ದಾರಿ ನಮ್ಮದಾಗಿದೆ. ಮೂರು ತಿಂಗಳೊಳಗಾಗಿ ಜಾಗವನ್ನು ಕೊಟ್ಟು ಎಸ್ಟಿಮೇಟ್ ಮಾಡಿಸಿ ನಮಗೆ ತಂದು ಕೊಟ್ಟರೆ, ಅವರು ಬೇಗನೆ ಆಗಬೇಕೆಂದು ಆಸಕ್ತಿವಹಿಸಿದರೆ ಖಂಡಿತವಾಗಿ ನಾವು ಹಾವೇರಿಗೆ ಮಾಡಿಸಿಕೊಡುತ್ತೇವೆ.

ಶ್ರೀ ಪಿ. ರಮೇಶ್: ಮಾನ್ಯ ಅಧ್ಯಕ್ಷರೆ, ಹೊಳಲ್ಕೆರೆಯಲ್ಲಿ ನಾವು ಜಾಗವನ್ನು ಒಂದು ತಿಂಗಳ ಹಿಂದೆ ಕೊಡಲಾಗಿದೆ. ಹೊಳಲ್ಕೆರೆಯಲ್ಲಿ ನಾವು ಒಂದು ಉತ್ತಮವಾದ ಜಾಗವನ್ನು ವ್ಯವಸ್ಥೆ ಮಾಡಿ ಕೊಟ್ಟಿದ್ದೇವೆ. ಅವರು ಬಾಡಿಗೆ ಕಟ್ಟಡದಲ್ಲಿ ಇಲ್ಲಿಯವರೆಗೆ ಇರುವುದರಿಂದ ಈ ಸಲ ನಮಗೆ ವ್ಯವಸ್ಥೆ ಮಾಡಿಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಆ ಜಾಗವನ್ನು ನೋಡದಿರುವುದರಿಂದ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಮರೆಯದೆ ಚಾಮರಾಜನಗರದ ಹೆಸರನ್ನು ಹೇಳುತ್ತಿರುವುದರಿಂದ ನನಗೆ ಬಹಳ ಸಂತೋಷವಾಗುತ್ತದೆ. ನಾವು ಬಹಳ ಟೇಲೆಂಡ್ ಏರಿಯಾದಲ್ಲಿರತಕ್ಕಂಥವರು, ಈಗ ಬರತಕ್ಕಂಥ ಹಣ ನಮ್ಮ ಚಾಮರಾಜನಗರಕ್ಕೆ ತಲುಪುವುದಿಲ್ಲ. ಆದಕ್ಕಾಗಿ ಹೊಸದಾಗಿ ಜಿಲ್ಲೆಯಾಗಿರತಕ್ಕಂಥ ಪರಿಸ್ಥಿತಿಯಲ್ಲಿ ಅಲ್ಲಿ ವಸತಿ ಗೃಹಗಳು ಇರುವುದಿಲ್ಲ, ಎಸ್‌ಪಿ ಆಫೀಸ್ ಒಂದು ಸಣ್ಣ ಪೊಲೀಸ್ ಸ್ಟೇಷನ್‌ನಲ್ಲಿ ಇವತ್ತು ನಡೆಯುತ್ತಿದೆ. ಅಲ್ಲಿ ಜೈಲು ಕೂಡ ಇರುವುದಿಲ್ಲ, ಖೈದಿಗಳನ್ನು ಮೈಸೂರು ಜಿಲ್ಲೆಗೆ ಕರೆದುಕೊಂಡು ಹೋಗುತ್ತಾರೆ. ದಯಮಾಡಿ ಆ ಕಟ್ಟಡ ಕೂಡ ಆಗಬೇಕು. ವಸತಿ ಗೃಹ, ಜೈಲು ಹಾಗೂ ಎಸ್‌ಪಿ ಆಫೀಸ್ ಈ ಮೂರು ಕೆಲಸಗಳನ್ನು ಮರೆಯದೆ ಚಾಮರಾಜನಗರ ಜಿಲ್ಲೆಗೆ ಮಾಡಿಸಿಕೊಡಬೇಕು. ಕೇಂದ್ರ ಸರ್ಕಾರದಿಂದ 32 ಕೋಟಿ ರೂಪಾಯಿ ರಾಜೀವ್

82 ಕೋಟಿ ರೂಪಾಯಿ ಹಣ ಇದೆ ಎಂದು ತಾವು ಹೇಳುವುದರಿಂದ ಇದನ್ನು ವಿಯಮಾಡಿ ಮಾಡಿಸಿಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಚಾಮರಾಜನಗರ ಜಿಲ್ಲೆಯನ್ನು ಮರೆತಂತೆ ಕಾಣುತ್ತದೆ, ಅವರು ಚಾಮರಾಜನಗರ ಜಿಲ್ಲೆಗೆ ಹಲವಾರು ಸಭೆಗಳಿಗೆ ಕರೆದರೂ ಕೂಡ ಬರುತ್ತಿಲ್ಲ. ಚಾಮರಾಜನಗರ ಜಿಲ್ಲೆಯ ಮಂತ್ರಿಗಳು, ಅವರೇ ಮುಖ್ಯಮಂತ್ರಿಗಳು ಹಾಗೂ ಎಲ್ಲಾ ಇಲಾಖೆಯ ಮಂತ್ರಿಗಳಾಗಿದ್ದಾರೆ. ಎಲ್ಲಾ ಅವರೇ ಆಗಿರುವುದರಿಂದ ನಾವು ಬೇಡ ಎನ್ನುವುದಿಲ್ಲ, ಆಗಲಿ ನಮಗೆ ಸಂತೋಷವಿದೆ. ಆದರೆ ಅಭಿವೃದ್ಧಿ ದೃಷ್ಟಿಯಿಂದ ಬರತಕ್ಕಂಥ ಹಣವನ್ನು ಒದಗಿಸಿಕೊಡಲಿ. ಮಾನ್ಯ ಗೃಹ ಸಚಿವರು ನಮ್ಮನ್ನು ಮರೆಯದೆ ಹೆಚ್ಚಿನ ಒಂದು ಹಣವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಮೊದಲೆ ಹೇಳಿದಂತೆ, ಹೊಸ ಜಿಲ್ಲೆಗಳನ್ನು ಹಿಂದೆ ಮಾಡಿರುತ್ತಾರೆ. ಆ ಎಲ್ಲಾ ಜಿಲ್ಲೆಗಳಿಗೂ ಕೂಡ ಎಸ್‌ಪಿ ಆಫೀಸಿಗೆ ಕಾಂಪ್ಲೆಕ್ಸ್ ಮಾಡತಕ್ಕಂಥ ನಿರ್ಣಯವನ್ನು ನಾವು ತೆಗೆದುಕೊಂಡಿರುತ್ತೇವೆ. ಅದಕ್ಕೆ ಹಣವನ್ನು ಒದಗಿಸಿಕೊಡುವ ನಿರ್ಣಯವನ್ನು ನಾವು ಮಾಡಿದ್ದೇವೆ. ಚಾಮರಾಜನಗರದಲ್ಲಿ ಕೂಡ ಎಸ್‌ಪಿ ಆಫೀಸ್ ಹಾಗೂ ಡಿವೈಎಸ್‌ಪಿ ಆಫೀಸ್ ಕಟ್ಟಿಸುತ್ತೇವೆ, ಅದರಲ್ಲಿ ಕೆಲವು ಕ್ವಾರ್ಟರ್ಸ್ ಕಟ್ಟಿಸುವುದಕ್ಕೂ ಕೂಡ ನಾವು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅಲ್ಲಿ ಸುಮಾರು 4-5 ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತದೆ. ತಾವು ಕೂಡ ಸ್ವಲ್ಪ ಆಸಕ್ತಿಯನ್ನು ವಹಿಸಿ ಮುಖ್ಯವಾಸ್ತು ಶಿಲ್ಪಿಯವರಿಗೆ ಭೇಟಿಯಾಗಿ ನಿಮ್ಮಲ್ಲಿ ಯಾವ ರೀತಿಯಾಗಿ ಆಫೀಸ್ ಹಾಗೂ ಕ್ವಾರ್ಟರ್ಸ್ ಇರಬೇಕು, ಯಾವ ಸ್ಥಳದಲ್ಲಿ ಇರಬೇಕು ಎನ್ನುವುದನ್ನು ಬೇಗಬೇಗನೆ ಕೊಟ್ಟು ಕಳುಹಿಸಬೇಕು. ಕೆಲವೊಂದು ಸಲ ಏನಾಗುತ್ತದೆಂದರೆ, ಇಂಥ ಹಾಗೂ ಸಿಂಥ ಯವರು ಬೇಗನೆ ಕಳುಹಿಸಿಕೊಡುವುದಿಲ್ಲ. ಒಂದೊಂದಕ್ಕೆ ನಾವು ಕೇಳಿಕೊಂಡು ಮಾಹಿತಿಯನ್ನು ಸಂಗ್ರಹಿಸಿ ತೆಗೆದುಕೊಳ್ಳುವುದಕ್ಕೆ ಸ್ವಲ್ಪ ತಡವಾಗುತ್ತದೆ. ಅದಕ್ಕಾಗಿ ತಾವು ಸ್ವಲ್ಪ ಆಸಕ್ತಿ ವಹಿಸಿ ಅದಕ್ಕೆ ನಾವು ಹಣವನ್ನು ಒದಗಿಸಿಕೊಡುತ್ತೇವೆ.

ಶ್ರೀ ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ಪೊಲೀಸ್ ಸ್ಟೇಶನ್ ಮಂಜೂರಾಗಿ 8-9 ವರ್ಷಗಳಾಯಿತು. ಈಗಲೂ ಕೂಡ ಅದು ಮಹಾನಗರ ಪಾಲಿಕೆಯ ಕಟ್ಟಡದಲ್ಲಿ ಪೊಲೀಸ್ ಸ್ಟೇಶನ್ ನಡೆಯುತ್ತಿದೆ. ಈಗಾಗಲೇ ಜಾಗವನ್ನು ಮಹಾನಗರ ಪಾಲಿಕೆಯಿಂದ ಮೀಸಲಾಗಿಸಲಾಗಿದೆ. ತ್ವರಿತವಾದ ಒಂದು ಪೊಲೀಸ್ ಸ್ಟೇಶನ್‌ಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದಿನ ಸರ್ಕಾರದವರು ಮಂಗಳೂರಿನ ಸೆಂಟ್ರಲ್ ಜೈಲ್‌ನ್ನು ಸುರಕ್ಷತೆ ಕಡಿಮೆ ಇದೆ ಎಂದು, ಅದನ್ನು ಬೇರೆ ಕಡೆಗೆ ಒಯ್ಯುವ ಎಲ್ಲ ವ್ಯವಸ್ಥೆಯಾಗಿದೆ, ಅದು ಇತ್ತೀಚಿನ ದಿನಗಳಲ್ಲಿ ಬಹಳ ನೆನೆಗುದಿಗೆ ಬಿದ್ದಿದೆ. ಆದ್ದರಿಂದ ಸಬ್ ಜೈಲನ್ನು ನಗರದ ಸ್ವಲ್ಪ ದೂರದ ಪ್ರದೇಶದಲ್ಲಿ ಮಾಡಬೇಕೆಂದು ಮಾನ್ಯ ಗೃಹ ಸಚಿವರನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಮಾಡಿರುವ ಎಸ್ಟಿಮೇಟ್ ಕಾಪಿಯನ್ನು ನನಗೆ ಕೊಟ್ಟರೆ, ನಾವು ಹುಡ್ಕೋದಿಂದ ಲೋನ್ ತೆಗೆದುಕೊಳ್ಳುತ್ತಿದ್ದೇವೆ, ಅದನ್ನು ನಾನು ಖಂಡಿತವಾಗಿ ನಾನ್ ರೆಸಿಡೆನ್ಷಿಯಲ್ ಕ್ವಾರ್ಟರ್ಸ್‌ನಲ್ಲಿ ಮಾಡಿಸಿಕೊಡುತ್ತೇನೆ.

ಶ್ರೀ ಎಂ. ಭಕ್ತವತ್ಸಲಂ: ಮಾನ್ಯ ಅಧ್ಯಕ್ಷರೆ, ಎಸ್‌ಪಿ ಕಛೇರಿ ಹಾಗೂ ವಸತಿ ಗೃಹದ ಬಗ್ಗೆ ಮಾನ್ಯ ಸಚಿವರು ಇಲ್ಲಿ ಹೇಳಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಒಂದು ಡಿಸ್ಟ್ರಿಕ್ಟ್ ಪೊಲೀಸ್ ಸ್ಟೇಶನ್ ಇದೆ. ನನ್ನ ಕ್ಷೇತ್ರದಲ್ಲಿ ಎಸ್‌ಪಿ ಹಾಗೂ ಡಿವೈಎಸ್‌ಪಿ ಯವರು ಇದ್ದಾರೆ. ಇವರಿಗೆ ವಸತಿ ಗೃಹಗಳನ್ನು ಬಿಜಿಎಂಎಲ್ ನಿಂದ ಮಾಡಿಕೊಟ್ಟಿದ್ದು, ಪೊಲೀಸ್ ಇಲಾಖೆಯಿಂದ ಮಾಡಿಕೊಟ್ಟಿರುವುದಿಲ್ಲ. 40 ಮನೆಗಳನ್ನು ನಿಮ್ಮ ಪೊಲೀಸ್ ಇಲಾಖೆಯಿಂದ ಕಟ್ಟಿದ್ದಾರೆ. ಅವರಿಗೆ ಮನೆ ಹಾಗೂ ರಸ್ತೆ ಇನ್ನಿತರ ಯಾವುದೇ ವ್ಯವಸ್ಥೆ ಇರುವುದಿಲ್ಲ. ಅವರು 24 ಗಂಟೆಗಳ ಸಮಯ ಕೆಲಸವನ್ನು ಮಾಡುತ್ತಾರೆ. ಪೊಲೀಸ್‌ರು ಕುಡಿಯುವ ನೀರಿಗಾಗಿ 6-7 ಕಿ.ಮೀ. ಹೋಗಬೇಕು. ಪಿಡಬ್ಲ್ಯೂಡಿ ಯವರು ಹಾಗೂ ಮುನ್ಸಿಪಾಲ್ಟಿಯವರು ನೀರಿನ ವ್ಯವಸ್ಥೆಯನ್ನು ಮಾಡಿಕೊಡದಿರುವುದರಿಂದ ಅಲ್ಲಿರುವ ಎಸ್‌ಪಿ ಹಾಗೂ ಡಿವೈಎಸ್‌ಪಿ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಸೇರಿಕೊಂಡು ಎಲ್ಲರಿಗೂ ತೊಂದರೆಯಾಗಿರುವುದರಿಂದ ಅಲ್ಲಿ ಬೇಕಾಗಿರುವ ಎಲ್ಲ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ನಾನು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಹೆಚ್. ಶಿವಶಂಕರರೆಡ್ಡಿ: ಮಾನ್ಯ ಅಧ್ಯಕ್ಷರೆ, ಗೌರಿಬಿದನೂರಿನಲ್ಲಿ ಪೊಲೀಸ್ ಇಲಾಖೆಯವರಿಗೆ ಯಾವುದೇ ಸ್ವಂತ ಕಟ್ಟಡ ಇರುವುದಿಲ್ಲ. ಪೊಲೀಸ್ ಸ್ಟೇಶನ್ ಕಟ್ಟುವುದಕ್ಕೆ 8 ಎಕರೆ ಜಮೀನು ಕೂಡ ಕೇಳಿರುತ್ತಾರೆ, ಅದನ್ನು ಕೂಡ ನಾವು ಒದಗಿಸಿಕೊಡುತ್ತಿದ್ದೇವೆ. ನಮ್ಮದು ಬಾರ್ಡರ್ ತಾಲ್ಲೂಕಾಗಿರುವುದರಿಂದ ಈ ಒಂದು ಯೋಜನೆಯಲ್ಲಿ ಪೊಲೀಸ್ ಕ್ವಾರ್ಟರ್ಸ್‌ಗಳನ್ನು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ನಮ್ಮ ಬಾರ್ಡರ್ ತಾಲ್ಲೂಕಿನಲ್ಲಿ ಸರ್ಕ್ಯೂಲೈಟ್ ತೊಂದರೆ ಇರುವುದರಿಂದ ಮೊಬೈಲ್ ಸ್ಕ್ವಾಡ್ ಒದಗಿಸಿಕೊಡಬೇಕೆನ್ನುವ ಬಗ್ಗೆ ಕೂಡ ಹಿಂದೆ ಪ್ರಸ್ತಾಪವಾಗಿದೆ. ದಯಮಾಡಿ ಇದರ ಬಗ್ಗೆ ಮಾನ್ಯ ಸಚಿವರು ಪರಿಶೀಲಿಸಬೇಕೆಂದು ಜೊತೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಮುಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಶಂಕರರೆಡ್ಡಿ ಹಾಗೂ ವಿಜಯಕುಮಾರ ಶೆಟ್ಟಿಯವರಿಗೆ ನಾನು ಏನು ಹೇಳುತ್ತೇನೆಂದರೆ, ನಾವು 160 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಮಾಡಿರುತ್ತೇವೆ. ಈ ಯೋಜನೆ ಕೆಳಗಡೆ ಇದು ಬರುತ್ತಿದ್ದರೆ ನಾವು ಖಂಡಿತವಾಗಿ 1,2,3 ಎಂದು ಹಂತಗಳನ್ನು ಮಾಡಿದ್ದೇವೆ. ಇಲ್ಲದಿದ್ದರೆ ಅದನ್ನು 2ನೇ ಹಂತದಲ್ಲಿಯಾದರೂ ಇನ್‌ಕ್ಲೂಡ್ ಮಾಡುವ ಪ್ರಯತ್ನವನ್ನು ಮಾಡುತ್ತೇವೆ, ಸರ್ಕಾರದ ವತಿಯಿಂದ ಕೆಜಿಎಫ್‌ನಲ್ಲಿ 40 ಮನೆಗಳನ್ನು ಕಟ್ಟಿಸಿದ್ದೇವೆ. ಬಿಜಿಎಂಎಲ್‌ದಿಂದ ಎಸ್‌ಪಿ ಆಫೀಸಿಗೆ ಅನುಕೂಲವನ್ನು ಮಾಡಿಕೊಡಲಾಗಿದೆ. ಕೆಜಿಎಫ್‌ಗೆ ಒಂದು ಎಸ್‌ಪಿ ಕಛೇರಿ ಇದೆ, ಅದು ತಮಗೂ ಕೂಡ ಗೊತ್ತಿದೆ. ಶ್ರೀ ಭಕ್ತವತ್ಸಲಂ ರವರು ಕೆಜಿಎಫ್‌ಗೆ ಮುನ್ಸಿಪಲ್ ಕೌನ್ಸಿಲರ್ ಆಗಿದ್ದರು, ಅವರು ಇವತ್ತು ಶಾಸಕರಾಗಿದ್ದಾರೆ, ಅವರು ನಮಗೆ ಏನು ಕೊಡುವುದು ಬೇಡ, ಕೊನೆಗೆ ಅವರು ನಮ್ಮ ಪೋಲೀಸ್‌ರಿಗೆ ನೀರನ್ನಾದರೂ ಕೊಡುವ ವ್ಯವಸ್ಥೆ ಮಾಡುವುದು ಬೇಡವೇ? ಅವರು ಇವತ್ತು ಶಾಸಕರಾಗಿರುವುದರಿಂದ ನಲ್ಲಿ ನೀರು ಹಾಗೂ ರಸ್ತೆಯನ್ನು ಮುನ್ಸಿಪಾಲ್ಟಿಯಿಂದ ಮಾಡಿಸಿಕೊಟ್ಟರೆ ಒಳ್ಳೆಯದಾಗುತ್ತದೆ. ಕ್ವಾರ್ಟರ್ಸ್ ಹಾಗೂ ಇನ್ನಿತರ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಹೊಸ ಜಿಲ್ಲೆಗಳಿಗೆ ಅದ್ಯತೆಯ ಮೇರೆಗೆ ಪೊಲೀಸ್ ಕ್ವಾರ್ಟರ್ಸ್‌ನ್ನು ಹಾಗೂ ಕಛೇರಿಗಳನ್ನು ಕಟ್ಟಿಸಿ ಕೊಡುತ್ತೇವೆಂದು ಹೇಳಿದರು. ಅದಕ್ಕೆ ಪೂರಕವಾಗಿ ಈ ರಾಜ್ಯದಲ್ಲಿ ಎಲ್ಲೆಲ್ಲಿ ಹೊಸ ಪೊಲೀಸ್ ಸ್ಟೇಶನ್‌ಗಳು ಪ್ರಾರಂಭವಾಗಿವೆ. ಉದಾಹರಣೆಗೆ ಸಂತೇಮರಹಳ್ಳಿಯಲ್ಲಿ ಪೊಲೀಸ್ ಠಾಣೆ ಪ್ರಾರಂಭವಾಗಿ ಸುಮಾರು ಮೂರು ವರ್ಷಗಳಾಯಿತು. ಅಲ್ಲಿ ಕಟ್ಟಡ ಇಲ್ಲ ಹಾಗೂ ಪೊಲೀಸ್ ವಸತಿಗೃಹಗಳು ಇರುವುದಿಲ್ಲ. ಈಗಾಗಲೇ ಕೇಂದ್ರ ಸ್ಥಳದಲ್ಲಿ 4-5 ಎಕರೆ ಜಮೀನನ್ನು ಪೊಲೀಸ್ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಜೊತೆಗೂಡಿ ಬಂದು ಇನ್ಸ್‌ಪೆಕ್ಷನ್ ಮಾಡಿ ಸೂಕ್ತ ಜಾಗವನ್ನು ಅವರು ತೀರ್ಮಾನ ಮಾಡಿರುತ್ತಾರೆ. ಹೊಸ ಪೊಲೀಸ್ ಠಾಣೆಗಳಿಗೆ ಹಾಗೂ ವಸತಿ ಗೃಹಗಳಿಗೆ ಯೋಜನೆಯನ್ನು ರೂಪಿಸಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಅಂಜನಮೂರ್ತಿ: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ಗೃಹಸಚಿವರಲ್ಲಿ ಎರಡು ಪ್ರಶ್ನೆಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ನೆಲಮಂಗಲ ಪಟ್ಟಣಕ್ಕೆ ಒಬ್ಬರು ಡಿವೈಎಸ್‌ಪಿ, ಒಬ್ಬರು ಸರ್ಕಲ್ ಇನ್ಸ್‌ಪೆಕ್ಟರ್, ಇಬ್ಬರು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಅಂದರೆ ಕ್ರೈಂ ಮತ್ತು ಎಲ್ ಅಂಡ್ ಓ ಇದ್ದಾರೆ. ಅವರಲ್ಲಿ ಯಾರಿಗೂ ಸರ್ಕಾರಿ ಕಟ್ಟಡಗಳಿರುವುದಿಲ್ಲ, ಎಲ್ಲರೂ ಬಾಡಿಗೆ ವಸತಿಗೃಹದಲ್ಲಿ ವಾಸವನ್ನು ಮಾಡುತ್ತಿದ್ದಾರೆ. ಅಲ್ಲಿ ಸಿಬ್ಬಂದಿ ವರ್ಗದವರಿಗೆ ಕಟ್ಟಿರುವಂತಹ ವಸತಿಗೃಹಗಳು ಸುಮಾರು 50 ವರ್ಷಗಳಿಂದ ಕಟ್ಟಿರುವಂತಹ ಕಟ್ಟಡಗಳಾಗಿವೆ. ಸಾಮಾನ್ಯವಾಗಿ ಮಳೆಗಾಲ ಬಂದರೆ ಅವರ್ಯಾರು ಒಳಗಡೆ ಮಲಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಷ್ಟೊಂದು ಅಧೋಗತಿಗೆ ಆ ವಸತಿಗೃಹಗಳು ಒಳಗಾಗಿವೆ. ಆದ್ದರಿಂದ ನಾವು ಬೇಕಾದರೆ ಜಾಗವನ್ನು ಕೊಡಿಸುತ್ತೇವೆ ತಾವು ದಯಮಾಡಿ ಸಿಬ್ಬಂದಿಯವರಿಗೆ ಸಂಬಂಧಪಟ್ಟ ಸ್ಥಳಪರೀಕ್ಷೆಯನ್ನು ಮಾಡಿಸಿ ನಮ್ಮ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿರುವ ಪೋಲೀಸ್ ಪೇದೆಗಳಿಗೆ ಮತ್ತು ಅಧಿಕಾರಿಗಳಿಗೆ ಕೂಡಲೇ ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಹಾಗೂ ಇದರ ಬಗ್ಗೆ ಏನು ಕ್ರಮವನ್ನು ಕೈಗೊಳ್ಳುತ್ತಾರೆಂದು ತಮ್ಮ ಮೂಲಕ ನಾನು ಮಾನ್ಯ ಗೃಹಸಚಿವರಲ್ಲಿ ಕೋರುತ್ತಿದ್ದೇನೆ.

ಶ್ರೀ ಸಿ.ಬಿ. ಸುರೇಶ್‌ಬಾಬು: ಸನ್ಮಾನ್ಯ ಅಧ್ಯಕ್ಷರೆ, ಕೆಲವು ದಿನಗಳ ಹಿಂದೆ ಸರ್ಕಾರದ ವತಿಯಿಂದ 9 ಹೊಸ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಿದ್ದಾರೆ. ಅದರಲ್ಲೂ ನನ್ನ ಕ್ಷೇತ್ರದ ಹಂಗನಕೆರೆ ಎಂಬ ಗ್ರಾಮಕ್ಕೆ ಒಂದು ಹೊಸ ಪೊಲೀಸ್ ಠಾಣೆಯನ್ನು ಸನ್ಮಾನ್ಯ ಗೃಹ ಸಚಿವರು ಮಂಜೂರು ಮಾಡಿದ್ದಾರೆ; ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಹೊಸ ಪೊಲೀಸ್ ಠಾಣೆ ಮಂಜೂರಾಗಿದ್ದರೂ ಸಹ ಕಟ್ಟಡದ ವ್ಯವಸ್ಥೆಯಿರುವುದಿಲ್ಲ, ಆದ್ದರಿಂದ, ಸದರಿ ಪೊಲೀಸ್ ಠಾಣೆಗೆ ಕಟ್ಟಡದ ವ್ಯವಸ್ಥೆಯನ್ನು ಒದಗಿಸಿಕೊಡಬೇಕೆಂದು ಸನ್ಮಾನ್ಯ ಗೃಹಸಚಿವರಲ್ಲಿ ಕೇಳುತ್ತಿದ್ದೇನೆ. ಇದರ ಜೊತೆಗೆ ಚಿಕ್ಕನಾಯಕನಹಳ್ಳಿ ಟೌನ್‌ನಲ್ಲಿ ವೃತ್ತ ನಿರೀಕ್ಷಕರವರಿಗೂ ಕಟ್ಟಡದ ವ್ಯವಸ್ಥೆಯಿರುವುದಿಲ್ಲ, ಅದನ್ನೂ ಕೂಡ ಒದಗಿಸಿಕೊಡಬೇಕೆಂದು ಸನ್ಮಾನ್ಯ ಗೃಹ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ.ಎಸ್. ಈಶ್ವರಗೌಡ: ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕಲಘಟಗಿ ತಾಲ್ಲೂಕು ಹುಬ್ಬಳ್ಳಿ ಮಹಾನಗರದಿಂದ ಸುಮಾರು 35 ಕಿ.ಮೀ. ದೂರದಲ್ಲಿರುತ್ತದೆ. ನಮ್ಮ ತಾಲ್ಲೂಕು ಮಲೆನಾಡು ಅಭಿವೃದ್ಧಿಯಲ್ಲಿ ಬರುತ್ತದೆ, ಅಲ್ಲಿ ಹಿಂದೆ ಬ್ರಿಟಿಷರ ಕಾಲದಲ್ಲಿ ಕಟ್ಟಿದಂತಹ 5 ವಸತಿಗೃಹಗಳು ಮಾತ್ರ ಪೊಲೀಸ್ ಇಲಾಖೆಯಲ್ಲಿದೆ. ಇನ್ನುಳಿದ ಯಾವ ಸಿಬ್ಬಂದಿಯವರಿಗೂ ವಾಸವನ್ನು ಮಾಡಬೇಕಾದರೆ ಅಲ್ಲಿ ಮನೆಗಳು ಸರಿಯಿಲ್ಲ ಏಕೆಂದರೆ, ಅಲ್ಲಿ ಮಲೆನಾಡು ಅಭಿವೃದ್ಧಿ ಇದ್ದ ಕಾರಣ ಅಲ್ಲಿ ಕರಿಹೆಂಚಿನ ಹಾಗೂ ಕೆಂಪು ಹೆಂಚಿನ ಮನೆಗಳು ಹೆಚ್ಚಾಗಿರುತ್ತವೆ. ಆರ್‌ಸಿಸಿ ಕಟ್ಟಡಗಳು ನಮ್ಮ ಕ್ಷೇತ್ರದಲ್ಲಿ ಕಡಿಮೆ ಇದೆ, ಅಲ್ಲಿರುವಂತಹ ಸಿಬ್ಬಂದಿವರ್ಗ ಹುಬ್ಬಳ್ಳಿ ನಗರದಲ್ಲಿ ಬಾಡಿಗೆ ಮನೆಯನ್ನು ಮಾಡಿಕೊಂಡು ಹುಬ್ಬಳ್ಳಿಗೆ ಹೋ[illegible] ಬಂದು ಮಾಡುತ್ತಿದ್ದಾರೆ. ಅಲ್ಲಿ ಸರಿಯಾದಂತಹ ನೀರಿನ ವ್ಯವಸ್ಥೆಯಿಲ್ಲ, ವಾಸಮಾಡುವು[illegible]ರಿಯಾದ ಮನೆಗಳಿರುವುದಿಲ್ಲ, ಆ ಕಾರಣದಿಂದ ಪೊಲೀಸ್ ಸಿಬ್ಬಂದಿಯವರು ಪ್ರತಿನಿತ್ಯ ಹುಬ್ಬಳ್ಳಿಯಲ್ಲಿ ಮನೆಯನ್ನು ಮಾಡಿಕೊಂಡು ಹೋಗಿ ಬರುವುದು ಮಾಡುತ್ತಿದ್ದಾರೆ. ಅಲ್ಲಿರುವಂತಹ ಪೊಲೀಸ್ ಠಾಣೆಯು ಬಹಳ ಹಳೆಯದಾಗಿರುತ್ತದೆ, ಅದು ಕಟ್ಟಿಗೆಯಿಂದ ಕಟ್ಟಿರುವಂತಹ ಕರಿ ಹೆಂಚಿನ ಕಟ್ಟಡವಾಗಿರುತ್ತದೆ. ಆ ಒಂದು ಹೆಂಚಿನ ಕಟ್ಟಡವನ್ನು ತಾವು ಬದಲಾವಣೆಯನ್ನು ಮಾಡಿ ಸರ್ಕಾರದ ಪಟ್ಟಣದ ಪಂಚಾಯತಿಯೊಳಗೆ ಅಲ್ಲಿ ಒಂದು ಕ್ವಾರ್ಟರ್ಸ್‌ನ್ನು ಮಂಜೂರು ಮಾಡಿಕೊಡಬೇಕು. ಹುಬ್ಬಳ್ಳಿ-ಧಾರವಾಡಕ್ಕೆ ಹೋಗಿ ಬರುವಂತಹ ಬೈಪಾಸ್ ರಸ್ತೆ ಇದೆ. ಅದು ನನ್ನ ಕ್ಷೇತ್ರದ ಬೌಂಡರಿಗೆ ಬರುತ್ತದೆ, ಅಲ್ಲಿ ಈಗಾಗಲೇ ಸಾರಿಗೆ ಸಂಸ್ಥೆಯ ವಾಹನಗಳಿಂದ ಅಪಘಾತಗಳು ಸಾಕಷ್ಟು ಆಗುತ್ತಿರುತ್ತದೆ. ಅಲ್ಲಿ ಹೊಸದಾಗಿ ಒಂದು ಪೊಲೀಸ್ ಠಾಣೆಯನ್ನು ಮಂಜೂರು ಮಾಡಿಕೊಡಬೇಕು, ಅಕಸ್ಮಾತ್ ಪೊಲೀಸ್ ಠಾಣೆಯನ್ನು ಮಂಜೂರು ಮಾಡಿಕೊಡುವುದಕ್ಕೆ ಆಗುವುದಿಲ್ಲವೆಂದರೆ, ಅಲ್ಲಿ ಒಂದು ಬ್ರಾಂಚ್ ಆಫೀಸ್‌ನ್ನು ಮಂಜೂರು ಮಾಡಿಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಮಾಗಡಿ ರಸ್ತೆಯಲ್ಲಿರುವ ಪೊಲೀಸ್ ಕ್ವಾರ್ಟರ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದೆ, ಆದರೆ ಇದು ಮಾಗಡಿಗೆ ಹೋಗುವ ರಸ್ತೆ, ಆದರೆ ಈ ರಸ್ತೆಯು ಕೆಜಿಎಫ್, ರಾಣೆಬೆನ್ನೂರು, ಚಾಮರಾಜನಗರ, ಹೊಳಲ್ಕರೆ ಸುರತ್ಕಲ್, ಗೌರಿಬಿದನೂರು ಚಿಕ್ಕನಾಯಕನಹಳ್ಳಿ, ಕಲಘಟಗಿಗೆ ಹೋಗುತ್ತದೆಂದು ನನಗೆ ಇವತ್ತು ಗೊತ್ತಾಯಿತು. ಈ ಮಾಗಡಿ ರಸ್ತೆಯು ಎಲ್ಲಾ ರಸ್ತೆಗಳಿಗೆ ಹೋಗುತ್ತದೆ. ಇದು ಗೃಹಇಲಾಖೆಯ ಬೇಡಿಕೆ ಮೇಲೆ ಚರ್ಚೆಯಾಯಿತು, ಅಂದರೆ ಪೊಲೀಸ್ ವಸತಿಗೃಹಗಳ ಸ್ಥಿತಿ ಹೇಗಿದೆ ಎಂದು ಸನ್ಮಾನ್ಯ ಸಚಿವರಿಗೆ ಈಗ ಗೊತ್ತಾಗಿದೆ. ಇವರಿಗೆ ಮುಂಚೆಯೇ ಗೊತ್ತಿತ್ತು, ಇದರ ಬಗ್ಗೆ ತಾವು ಹೆಚ್ಚಿನ ಗಮನವನ್ನು ತೆಗೆದುಕೊಳ್ಳಬೇಕು, ನಿಮ್ಮಲ್ಲಿ ನನ್ನ ಒಂ[illegible]ಬೇಡಿಕೆ ಏನೆಂದರೆ, ಅಧಿವೇಶನ ಮುಗಿದನಂತರ ಒಂದು ದಿವಸ ಬೆಂಗಳೂರಿನಲ್ಲಿರುವ ಎಲ್ಲಾ ಪೊಲೀಸ್ ವಸತಿಗೃಹಗಳಿಗೆ ಭೇಟಿ ಕೊಡುವುದಾದರೆ ನಾನು ನಿಮ್ಮ ಜೊತೆ ಬರುತ್ತೇನೆ. ಅದರಲ್ಲೂ ವಿಶೇಷವಾಗಿ ನನ್ನ ಕ್ಷೇತ್ರದಲ್ಲಿ ಒಂದು ಜಾರಕ್‌ಬಂಡೆ ಕ್ವಾರ್ಟರ್ಸ್ ಎಂದಿದೆ, ಅದೊಂದು ಬಹಳ ದೊಡ್ಡದಾದ ವಸತಿ ಸಮುಚ್ಚಯವಾಗಿದೆ, ರಾಜಾಜಿನಗರದ ಎಡಹನೇ ಬ್ಲಾಕ್‌ನಲ್ಲಿ ಪೊಲೀಸ್ ಸ್ಟೇಷನ್‌ನ ಹಿಂದುಗಡೆ ಇದು ಇರುತ್ತದೆ. ಬೆಂಗಳೂರಿನಲ್ಲಿರುವ ಎಲ್ಲಾ ಪೊಲೀಸ್ ವಸತಿ ಗೃಹಗಳಿಗೆ ಗೃಹ ಸಚಿವರು ಭೇಟಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನನ್ನ ಇಚ್ಛೆ ಏನೆಂದರೆ ಈ ಪೊಲೀಸ್ ವಸತಿ ಗೃಹಗಳನ್ನು ದುರಸ್ಥಿ ಮಾಡಿ ಭೇಟಿ ಕೊಟ್ಟರು ಒಳ್ಳೆಯದೆಂದು ತಾವು ಕೇಳುವುದಕ್ಕೆ ಮುಂಚೆಯೇ ನಾನು ಹಣವನ್ನು ಬಿಡುಗಡೆ ಮಾಡಿದ್ದೇನೆ. ಎಲ್ಲೆಲ್ಲಿಗೆ ಭೇಟಿಯನ್ನು ಕೊಡಬೇಕೋ ಅಲ್ಲೆಲ್ಲಾ ಭೇಟಿ ಕೊಡೋಣ. ಈ ಎಲ್ಲಾ ಬೇಡಿಕೆಗಳು ಏತಕ್ಕಾಗಿ ಇದೆ ಎಂದರೆ, ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಪೊಲೀಸರಿಗೆ ಇವತ್ತು ವಸತಿ ಇರುವಂತಹ ಸೌಲಭ್ಯ ಸಿಕ್ಕಿರುವುದು ಕೇವಲ 48 ಪರ್ಸೆಂಟ್ ಮಾತ್ರ, ಇನ್ನು 52 ಪರ್ಸೆಂಟ್ ಜನರಿಗೆ ಕೆಚ್ಚುಕಡಿಮೆ ವಸತಿ ಸೌಕರ್ಯಗಳಿರುವುದಿಲ್ಲ. ಅವರೆಲ್ಲರಿಗೂ ನಾವು ವಸತಿ ಸೌಕರ್ಯವನ್ನು ಮಾಡಿಕೊಡಬೇಕಾದರೆ ಕೋಟ್ಯಾಂತರ ರೂಪಾಯಿಗಳು ನಮಗೆ ಬೇಕಾಗುತ್ತದೆ, ಅಷ್ಟನ್ನು ಒಂದೇ ಕಾಲಕ್ಕೆ ಒದಗಿಸಲು ಸಾಧ್ಯವಿರುವುದಿಲ್ಲ. ಅದಕ್ಕಾಗಿ ನಾವು ಪ್ರಥಮ ಹಂತದಲ್ಲಿ ಸುಮಾರು 6 ರಿಂದ 7 ಸಾವಿರ ಮನೆಗಳನ್ನು ನಿರ್ಮಾಣ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದಾದನಂತರ ಪುನಃ 60 ಪರ್ಸೆಂಟ್‌ನಿಂದ 65 ಪರ್ಸೆಂಟ್ ಹೆಚ್ಚು ಕಡಿಮೆ ಬರುತ್ತದೆ, ಮುಂದೆ ಹಂತಹಂತವಾಗಿ ಎಲ್ಲರಿಗೂ ವಸತಿಗೃಹಗಳನ್ನು ಒದಗಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಆದರೆ ಪೊಲೀಸ್ ಸ್ಟೇಷನ್ ಕಟ್ಟಡಗಳು ಕೆಲವು ಕಡೆ ಏನಾಗಿವೆ ಎಂದರೆ, ಸ್ಕೂಲ್‌ಗಳಲ್ಲಿ, ಕಮ್ಯುನಿಟಿ ಹಾಲ್‌ಗಳಲ್ಲಿ, ಮತ್ತೆ ಕೆಲವು ಕಡೆ ಮಾನ್ಯ ಸದಸ್ಯರಾದ ಶ್ರೀ ವಿಜಯಕುಮಾರ್ ಶೆಟ್ಟಿಯವರು ಹೇಳಿದಹಾಗೆ, ಮುನಿಸಿಪಲ್ ಕ್ವಾರ್ಟರ್ಸ್‌ನಲ್ಲಿ ಇದೆ. ಅದಕ್ಕಾಗಿ ನಾವು ಇವತ್ತು ಕೆಲವು ಕಡೆ ಅದನ್ನು ಗುರುತಿಸಿ ಅದಕ್ಕೂ ಕೂಡ ಹೊಸ ಕಟ್ಟಡಗಳನ್ನು ಒದಗಿಸಿಕೊಡಬೇಕೆನ್ನುವಂತಹ ದೃಷ್ಟಿಯಿಂದಲೇ 120 ಕೋಟಿ ರೂಪಾಯಿಗಳ ಕಾಮಗಾರಿ ಸಾಲವನ್ನು ತೆಗೆದುಕೊಂಡು ಹಂತಹಂತವಾಗಿ ಕಟ್ಟಡವನ್ನು ಕಟ್ಟಬೇಕೆಂದು ನಿರ್ಣಯವನ್ನು ಮಾಡಿದ್ದೇವೆ. ಅದು ಮಾನ್ಯ ಸದಸ್ಯರಾದ ಶ್ರೀ ಎ.ಆರ್. ಕೃಷ್ಣಮೂರ್ತಿಯವರ ಕ್ಷೇತ್ರದಲ್ಲಿರಬಹುದು, ಮಾನ್ಯ ಸದಸ್ಯರಾದ ಶ್ರೀ ಸುರೇಶ್‌ಬಾಬುರವರ ಕ್ಷೇತ್ರದಲ್ಲಿರಬಹುದು, ನೋಡಿ ತಾನೆ ಅವರಿಗೆ ಒಂದು ಹೊಸ ಪೊಲೀಸ್ ಠಾಣೆಯನ್ನು ಮಂಜೂರು ಮಾಡಿದ್ದೇನೆ. ಒಂದು ವರ್ಷಕ್ಕೆ ಒಂದು ಪೊಲೀಸ್ ಸ್ಟೇಷನ್‌ಗೆ 33 ಲಕ್ಷ ರೂಪಾಯಿಗಳು ಬರೀ ರೆಕರಿಂಗ್ ಎಕ್ಸ್‌ಪೆಂಡೀಚರ್ ಆಗುತ್ತದೆ. ಏನೋ ಸ್ಕೂಲ್ ಅಥವಾ ಇನ್ನೇನಾದರೂ ಇದ್ದರೆ ಒಂದು ಸಾರಿ ಅವರಿಗೆ ಒಂದು ಬಿಲ್ಡಿಂಗ್‌ನ್ನು ಕೊಟ್ಟರೆ ಅವರೆಲ್ಲರೂ ಖುಷಿಯನ್ನು ಪಡುತ್ತಾರೆ. ಒಂದು ರಸ್ತೆಗೆ 10 ರಿಂದ 20 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಖುಷಿ ಪಡುತ್ತಾರೆ. ಈ ಪೊಲೀಸ್ ಠಾಣೆಗಳಿಗೆ ರೆಕರಿಂಗ್ ಎಕ್ಸ್‌ಪೆಂಡಿಚರ್ ಆಗಿ ಪ್ರತಿ ವರ್ಷ 33 ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅದಕ್ಕೆ ಪೊಲೀಸ್ ಸ್ಟೇಷನ್‌ಗಳನ್ನು ಪ್ರೈಮರಿ ಶಾಲೆಯನ್ನು ತೆರೆದಂತೆ ತೆರೆಯುವುದಕ್ಕೆ ಸಾಧ್ಯವಿಲ್ಲ. ಎಲ್ಲೆಲ್ಲಿ ಏನೇನು ಇದೆ ಅದನ್ನು ಸಮೃಧಪಡಿಸಿಕೊಳ್ಳತಕ್ಕದ್ದು ಒಂದು, ಎರಡನೆಯದಾಗಿ ಹೇಳುವುದಾದರೆ ಪೊಲೀಸರ ಬಲ ಇರತಕ್ಕಂತಹ ಠಾಣೆಯಲ್ಲಿ ಸ್ವಲ್ಪ ಹೆಚ್ಚಿನ ಪೇದೆಗಳನ್ನು ಕೊಟ್ಟು ಸ್ವಲ್ಪ ಸ್ಟ್ರೆಂಥ್ ಅನ್ನು ಎನ್‌ಹ್ಯಾನ್ಸ್ ಮಾಡಿದರೆ ಕಾನೂನನ್ನು ಸುವ್ಯವಸ್ಥೆಯಲ್ಲಿಡುವುದರಲ್ಲಿ ನಮಗೆ ಸ್ವಲ್ಪ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ ನಾವು ಯೋಚನೆ ಮಾಡುತ್ತಿದ್ದೇವೆ. ಆದರೆ ಎಲ್ಲಿ ಅವಶ್ಯಕತೆ ಇದೆ ಅಲ್ಲಿಯೂ ಕೂಡ ನಾವು ಮಾಡಲೇಬೇಕಾಗಿದೆ, ಆದರೆ ಹಣದ ಕೊರತೆ ಇದ್ದ ಕಾರಣ ಹೋದ ಸಲ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ 10 ಪೊಲೀಸ್ ಠಾಣೆಗಳನ್ನು ತೆರೆಯುತ್ತೇವೆಂದು

ಹೇಳಿದ್ದರು. ಆದರೆ 10 ಪೊಲೀಸ್ ಠಾಣೆಗಳ ಬದಲಾಗಿ 13 ಠಾಣೆಗಳನ್ನು ಮಂಜೂರು ಮಾಡಿದ್ದೇವೆ. ಅದರಲ್ಲಿ ಮಾನ್ಯ ಸದಸ್ಯರಾದ ಶ್ರೀ ಸುರೇಶ್‌ಬಾಬುರವರ ಕ್ಷೇತ್ರಕ್ಕೆ ಒಂದು ಠಾಣೆ ಮಂಜೂರಾಯಿತು, ಕೋಲಾರಕ್ಕೆ ಒಂದು ಠಾಣೆಯನ್ನು ಕೊಟ್ಟಿದ್ದೇವೆ, ಗಂಗಾವತಿಗೆ ಮಂಜೂರು ಮಾಡಿದ್ದೇವೆ, ಇನ್ನು ಅನೇಕ ಕಡೆ ಮಾಡಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಅಂಜನಮೂರ್ತಿ ಕ್ಷೇತ್ರದಲ್ಲಿ ಏತಕ್ಕಾಗಿ ಉಳಿಯಿತೊ ಗೊತ್ತಾಗಲಿಲ್ಲ, ಶ್ರೀ ಆರ್.ಎಲ್. ಜಾಲಪ್ಪನವರು ಹಿಂದೆ ಗೃಹಮಂತ್ರಿಗಳಾಗಿದ್ದರು, ಈಗ ಹಾಲಿ ಲೋಕಸಭಾ ಸದಸ್ಯರಾಗಿದ್ದಾರೆ, ಮಾನ್ಯ ಸದಸ್ಯರಾದ ಶ್ರೀ ಅಂಜನಮೂರ್ತಿಯವರು ಪವರ್ ಫುಲ್ ಎಂಎಲ್‌ಎ ಆಗಿದ್ದಾರೆ. ಅಲ್ಲಿ ಸರ್ಕಾರದಿಂದ ಈ ಯೋಜನೆಯ ಕೆಳಗಡೆ ಬರುತ್ತದೆಯೇ ಎಂದು ನೋಡುತ್ತೇನೆ. ಡಿಎಸ್‌ಪಿ ಕ್ವಾರ್ಟರ್ಸ್ ಮೊದಲನೇ ಹಂತದಲ್ಲಿ ಸೇರಿದೆಯೋ ಹೇಗೆ ನೋಡುತ್ತೇನೆ, ಒಂದು ವೇಳೆ ಇಲ್ಲದಿದ್ದರೆ ಎರಡನೇ ಹಂತದಲ್ಲಿ ನಾವು ಏನು ಯೋಜನೆಯನ್ನು ಹಾಕಿಕೊಳ್ಳುತ್ತೇವೆ, ಆ ಯೋಜನೆಯಡಿಯಲ್ಲಿ ನಾನು ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಅಂಜನಮೂರ್ತಿ: ಅದು ಬಹಳ ಜರೂರಾಗಿ ಆಗಬೇಕಾಗಿರುತ್ತದೆ, ಈಗ ಏನು ಪೇದೆಗಳಿಗೆ ಕ್ವಾರ್ಟರ್ಸ್‌ನ್ನು ಕಟ್ಟಿರುತ್ತೀರಾ, ಅವು ಸುಮಾರು 50 ವರ್ಷಗಳ ಹಿಂದೆ ಕಟ್ಟಿರುವಂತಹ ಕಟ್ಟಡಗಳಾಗಿವೆ. ಮಳೆಗಾಲ ಬಂದರೆ ಅವರ ಸಂಸಾರವೆಲ್ಲಾ ಹೊರಗಡೆ ಇರುತ್ತದೆ. ಅಲ್ಲಿ ಯಾರು ವಾಸಮಾಡುವುದಕ್ಕಾಗುವುದಿಲ್ಲ, ಆದಕಾರಣ ಅತಿ ಜರೂರಾಗಿ ಈಗ ಇರತಕ್ಕಂತಹ ಕಟ್ಟಡಗಳನ್ನು, ಮನೆಗಳನ್ನು ದುರಸ್ಥಿ ಮಾಡಿಸುವುದಕ್ಕೆ ತಾವು ಕ್ರಮವನ್ನು ಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ರಿಪೇರಿಗೆ ಯೋಗ್ಯವಿರತಕ್ಕಂತಹ ಎಲ್ಲಾ ಕೊಠಡಿಗಳನ್ನು ಮಾಡುತ್ತೇವೆ, ಅಥವಾ ದುರಸ್ಥಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ ಹೊಸ ಕಟ್ಟಡಗಳನ್ನು ಕಟ್ಟುವ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ. ನಮ್ಮ ಕಲಘಟಗಿ ಮಿತ್ರರು ಹೇಳಿದರು, ಆ ಮತಕ್ಷೇತ್ರವೇ ಹಾಗೆ ಅಲ್ಲಿ ಶಾಸಕರು ಕೂಡ ಹುಬ್ಬಳ್ಳಿಯಲ್ಲಿಯೇ ಇದ್ದಾರೆ, ಆಫೀಸರ್ಸ್ ಕೂಡ ಹುಬ್ಬಳ್ಳಿಯಲ್ಲಿಯೇ ಹೆಚ್ಚು ಕಡಿಮೆ ಇದ್ದಾರೆ. ಎಲ್ಲಾ ಗ್ರಾಮಾಂತರ ಭಾಗ ಹುಬ್ಬಳ್ಳಿಯ ಅಕ್ಕಕ್ಕದಲ್ಲಿರತಕ್ಕಂತಹ ಮತಕ್ಷೇತ್ರವಾಗಿದೆ, ಈ ಒಂದು ಕಾರಣದಿಂದ ಎಲ್ಲಾ ಅಧಿಕಾರಿಗಳು ಹುಬ್ಬಳ್ಳಿಯಲ್ಲಿಯೇ ಇರುತ್ತಾರೆ. ಆದರೆ ಅವರು ಕಟ್ಟಡವಿಲ್ಲದ ಕಾರಣ ಅವರು ಹುಬ್ಬಳ್ಳಿಗೆ ಹೋಗುತ್ತಾರೆ ಎಂದು ಪ್ರಸ್ತಾಪ ಮಾಡಿದ್ದಾರೆ ಖಂಡಿತವಾಗಿ ನಾನು ಅದನ್ನು ಪರಿಶೀಲಿಸುತ್ತೇನೆ. ನಮ್ಮ ಯೋಜನೆಯೊಳಗೆ ಏನಾದರೂ ಈಗಾಗಲೇ ತೊಡಗಿಸಿದ್ದರೆ ಅದು ಮೊದಲನೆಯ ಹಂತದಲ್ಲಿ ಸಿಗುತ್ತದೆ. ಇಲ್ಲದೆ ಹೋದರೆ ನಾನು ಈಗಾಗಲೇ ಮೊದಲು-ಎರಡನೇ-ಮೂರನೇ ಹಂತ ಎಂದು ಮಾಡಿದ್ದೇವೆ, ಅದನ್ನು ಯಾವ ಯೋಜನೆಯ ಕೆಳಗಡೆ ತೆಗೆದುಕೊಳ್ಳಬಹುದು ಎಂಬುದರ ಬಗ್ಗೆ ನಾನು ಪರಿಶೀಲನೆಯನ್ನು ಮಾಡಬೇಕಾಗುತ್ತದೆ.